# ತಿಪಟೂರು ಪರಿಸರದ ಆಧುನಿಕ ಪೂರ್ವ ಕನ್ನಡ ಕವಿಗಳು

**ರಾಧಾ ಕೆ.ಎಂ.**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಹೊನ್ನಾದೇವಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಂಡಿನಶಿವರ.

DOI: https://doi.org/10.5281/zenodo.17773592

## ABSTRACT:

ಪ್ರಸ್ತುತ ಲೇಖನವು ತಿಪಟೂರು ಪರಿಸರದ ನಾಲ್ವರು ಆಧುನಿಕಪೂರ್ವ ಕನ್ನಡ ಕವಿಗಳಾದ ಗೌರವಾಂಕ (ಕ್ರಿ.ಶ. 1525), ಕರಿಸಿದ್ಧೇಶ್ವರ ಸ್ವಾಮಿ (ಕ್ರಿ.ಶ. 1560), ಪ್ರಸನ್ನದೇಶಿಕ (ಕ್ರಿ.ಶ. 1610) ಮತ್ತು ಕರಿವೃಷಭ ದೇಶೀಕೇಂದ್ರ ಸ್ವಾಮಿ (ಕ್ರಿ.ಶ. 1808) ಇವರನ್ನು ಸಮೀಕ್ಷಿಸುತ್ತದೆ. ಈ ಕವಿಗಳ ಮೇಲೆ ವೀರಶೈವ ಧರ್ಮದ ಪ್ರಬಲ ಪ್ರಭಾವವಿದ್ದು, ಅವರು ತಮ್ಮ ಧಾರ್ಮಿಕ ಶ್ರದ್ಧೆಯನ್ನು ದೇಸೀ ಸಾಹಿತ್ಯ ಪ್ರಕಾರಗಳಾದ ಸಾಂಗತ್ಯ, ಭೋಗಷಟ್ಪದಿ, ತಾರಾವಳಿ ಮತ್ತು ಕೈವಲ್ಯಪದಗಳಲ್ಲಿ ವಿಪುಲವಾಗಿ ನಿರೂಪಿಸಿದ್ದಾರೆ. ಇವರ ಕೃತಿಗಳಲ್ಲಿ ಕಥಾ ಕಥನ ನೈಪುಣ್ಯ ಮತ್ತು ಸಾಹಿತ್ಯಕ ಸೊಗಸು ಕಂಡುಬಂದರೂ, ಸರಿಯಾದ ಅಧ್ಯಯನದ ಕೊರತೆಯಿಂದಾಗಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸೂಕ್ತ ಸ್ಥಾನ ಪಡೆಯುವಲ್ಲಿ ಹಿಂದುಳಿದಿವೆ ಎಂದು ಲೇಖಕರು ಅಭಿಪ್ರಾಯಪಡುತ್ತಾರೆ. ಈ ಸಮೀಕ್ಷೆಯು ಈ ಕವಿಗಳ ಹಿರಿಮೆಯನ್ನು ದಾಖಲಿಸುವ ಪ್ರಯತ್ನವಾಗಿದೆ.

## KEYWORDS:

ತಿಪಟೂರು ಪರಿಸರ, ಆಧುನಿಕಪೂರ್ವ ಕವಿಗಳು, ವೀರಶೈವ ಸಾಹಿತ್ಯ, ದೇಸೀ ಸಾಹಿತ್ಯ ಪ್ರಕಾರಗಳು, ಕೈವಲ್ಯಪದ, ಸಾಂಗತ್ಯ.

ತಿಪಟೂರು ಪರಿಸರವು ಹಲವು ಅರಸುಮನೆತನಗಳ ರಾಜಕೀಯ ಸ್ಥಿತ್ಯಂತರಗಳಿಗೊಳಗಾಗಿ, ವಿಭಿನ್ನ ಸಾಂಸ್ಕೃತಿಕ, ಧಾರ್ಮಿಕ, ಸಾಹಿತ್ಯ ಕಲೆಗಳ ನೆಲೆವೀಡಾಗಿದೆ. ಕಲ್ಪತರು ನಾಡಿನ ಉದ್ದಗಲಕ್ಕೂ ಹರಡಿರುವ ಶಾಸನಗಳು ಹಾಗೂ ರಚನೆಯಾಗಿರುವ ಸಾಹಿತ್ಯ ಕೃತಿಗಳು ಈ ವಿವರವನ್ನು ಸಾಬೀತುಪಡಿಸುತ್ತವೆ. ಇಲ್ಲಿಯ ಆಧುನಿಕಪೂರ್ವ ಸಾಹಿತ್ಯಕ್ಕೆ ಪ್ರಮುಖ ಪ್ರೇರಣೆ ಮತಧರ್ಮವಾಗಿದೆ. ಇಲ್ಲಿಯ ಕವಿಗಳು ಹುಟ್ಟಿ ಬೆಳೆದ ಪರಿಸರದಲ್ಲಿದ್ದ ಹಾಗೂ ಶ್ರದ್ಧೆಯಿಂದ ಒಪ್ಪಿಕೊಂಡಿದ್ದ ಪ್ರಮುಖ ಮತಧರ್ಮಗಳು ಮತ್ತು ಕನ್ನಡ ಸಾಹಿತ್ಯಕ್ಕೆ ಆರಂಭಕಾಲದಿಂದಲೂ ಹಿನ್ನೆಲೆಯಾಗಿದ್ದುಕೊಂಡು ಕಾವ್ಯಗಳ ವಸ್ತು ಹಾಗೂ ಭಾಷೆಯ ಮೇಲೆ ಪ್ರಬಲವಾದ ಪ್ರಭಾವವನ್ನು ಬೀರುತ್ತಾ ಬಂದ ಸಂಸ್ಕೃತ ಸಾಹಿತ್ಯ ಪರಂಪರೆಗಳು ಕವಿಗಳಿಗೆ ಪ್ರೇರಣೆ ನೀಡಿವೆ. ಇವುಗಳು ಒಂದು ರೀತಿಯಲ್ಲಿ ಆತಂಕ ಮತ್ತು ಸವಾಲುಗಳಾಗಿಯೂ ಪರಿಣಮಿಸಿವೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ತುಮಕೂರು ಜಿಲ್ಲೆಯ ಕವಿಗಳ ಸ್ಥಾನದಲ್ಲಿ, ಹನ್ನೆರಡನೇ ಶತಮಾನದ ಶಿವಶರಣರ ಆಂದೋಲನ ಹಾಗೂ ನಂತರದ ಚಟುವಟಿಕೆಗಳು ಜಿಲ್ಲೆಯಲ್ಲಿ ಸಾಕಷ್ಟು ಪ್ರಭಾವ ಬೀರಿದ್ದುದರಿಂದಲೋ ಏನೋ, ದೇಸೀ ಸಾಹಿತ್ಯ ಪ್ರಕಾರಗಳಲ್ಲಿಯೇ ಸಾಹಿತ್ಯ ಕೃಷಿ ವಿಪುಲವಾಗಿ ನಡೆದಿದೆ. ಧರ್ಮದ ದೃಷ್ಟಿಯಿಂದ ಇಲ್ಲಿಯ ಕವಿಗಳ ಮೇಲೆ ವೀರಶೈವ ಧರ್ಮದ ಪ್ರಭಾವವೇ ಯಥೇಚ್ಛವಾಗಿರುವುದರಿಂದ ವೀರಶೈವ ಸಾಹಿತ್ಯದ ಕೃಷಿ ಹುಲುಸಾಗಿದೆ. ಇಲ್ಲಿಯ ವೀರಶೈವ ಕವಿಗಳು ತಮ್ಮ ಧಾರ್ಮಿಕ ಶ್ರದ್ಧೆಯನ್ನು ನೂತನ – ಪುರಾತನ ಶಿವಭಕ್ತರನ್ನು ಕುರಿತು ಕಾವ್ಯ–ಪುರಾಣಗಳನ್ನು ರಚಿಸುವಲ್ಲಿ, ವೀರಶೈವ ಧರ್ಮದ ಆಚರಣೆ–ತತ್ವಗಳನ್ನು ಕುರಿತು ನಿರೂಪಿಸುವಲ್ಲಿ ಪ್ರಕಟಪಡಿಸಿದ್ದಾರೆ. ತಿಪಟೂರು ಪರಿಸರದ ಪ್ರಾಚೀನ ಸಾಹಿತ್ಯ ನಿರ್ಮಾಣವು ವಿವಿಧ ಷಟ್ಪದಿ ಪ್ರಕಾರಗಳು, ಸಾಂಗತ್ಯ, ಸ್ವರವಚನ ಸಾಹಿತ್ಯ, ತಾರಾವಳಿ ಸಾಹಿತ್ಯ ಇತ್ಯಾದಿ ಪ್ರಕಾರಗಳಲ್ಲಿ ನಡೆದಿದೆ. ಇಲ್ಲಿಯ ಕನ್ನಡ ಸಾಹಿತ್ಯಕ್ಕೆ ಧಾರ್ಮಿಕ ಪ್ರೇರಣೆಯಿಂದಾಗಿ ಆಳ ಅಗಲಗಳು ಪ್ರಾಪ್ತವಾಗಿವೆ ಎಂದೆನಿಸಿದ್ದರೂ ಧರ್ಮದ ಅತಿಯಾದ ಅನುಸರಣೆಯಿಂದಾಗಿ ಇಲ್ಲಿಯ ಸಾಹಿತ್ಯ ಕೆಲವೆಡೆ ಶುಷ್ಕ ಎಂದೆನಿಸಿದೆ. ಆಧುನಿಕ ಪೂರ್ವದಲ್ಲಿ ಈ ಪರಿಸರದಲ್ಲಿ ಮೂವರು ಕವಿಗಳು ಆಗಹೋಗಿದ್ದಾರೆ. ಈ ಕವಿಗಳು ಬಹುಮಟ್ಟಿಗೆ ದೇಸಿ ಸಾಹಿತ್ಯ ಪ್ರಕಾರದಲ್ಲಿ ಸಾಹಿತ್ಯ ಕೃಷಿ ಮಾಡಿದ್ದಾರೆ. ಅವರುಗಳೆಂದರೆ ಗೌರವಾಂಕ, ಕರಿಸಿದ್ಧೇಶ್ವರ ಸ್ವಾಮಿ, ಪ್ರಸನ್ನ ದೇಶಿಕ ಇವರುಗಳು ತಿಪಟೂರು ಪರಿಸರದ ಹೊನ್ನವಳ್ಳಿಯವರಾಗಿದ್ದಾರೆ. ಕರಿವೃಷಭ ದೇಶೀಕೇಂದ್ರರು ನೊಣವಿನ ಕೆರೆಯವರಾಗಿದ್ದಾರೆ. ಈ ನಾಲ್ವರು ಕವಿಗಳ ಇತಿವೃತ್ತ, ಅವರುಗಳು ರಚಿಸಿರುವ ಕಾವ್ಯಗಳ ಕುರಿತು ಲಭ್ಯವಿರುವ ವಿವಿಧ ಮೂಲಗಳಿಂದ ವಿವರಗಳನ್ನು ಕ್ರೋಢೀಕರಿಸಿ ಸಮೀಕ್ಷಿಸಲಾಗಿದೆ.

## 1. ಹೊನ್ನವಳ್ಳಿಯ ಕವಿ ಗೌರವಾಂಕ: (ಕ್ರಿ.ಶ. 1525)

ಶರಣ ಮೋಳಿಗೆಯ್ಯನನ್ನು ಕುರಿತು ಸಾಂಗತ್ಯ ಪ್ರಕಾರದಲ್ಲಿ 'ಮೋಳಿಗೆಯ್ಯನ

ಪುರಾಣ'ವನ್ನು ರಚಿಸಿದ ಕವಿ ಗೌರವಾಂಕನು ತನ್ನನ್ನು 'ಗೌರವ', 'ಗೌರ' ಇಲ್ಲವೆ 'ಗೌರವಾಂಕ' ಎಂದೂ ಕರೆದುಕೊಂಡಿದ್ದಾನೆ. ಗೌರವನೇ ಈ ಮೋಳಿಗೆಯ್ಯನ ಪುರಾಣವನ್ನು ರಚಿಸಿದಾತನೆಂಬ ಸಂಗತಿ ಈ ಕೃತಿಯ ಪದ್ಯಗಳಿಂದಲೇ ತಿಳಿದು ಬರುತ್ತದೆ. ಪ್ರತಿ ಸಂಧಿಯ ಪ್ರಾರಂಭದಲ್ಲಿ, ಗ್ರಂಥಾಂತ್ಯದಲ್ಲಿ ಹಲವು ಸಂದರ್ಭಗಳಲ್ಲಿ ಕವಿ ತನ್ನ ಹೆಸರನ್ನು ಹೇಳಿಕೊಂಡಿದ್ದಾನೆ.... ಗೌರವ ಮೋಳಿಗೆಯ್ಯನ ಪುಣ್ಯಚರಿತವ ಪೇಳ್ವುದೆಂತೆನಲು (ಸಂ.1, ಪ.4).... ಶಿವಕವಿಗಳ ಶಿವಭಕ್ತ ವಾಗ್ಮೀಕರ ಶಿವಾನುಪತಿ ಗಮಕಿಗಳ ವ್ಯಾಪಕ ಶಿವಕವಿ ಗೌರವಾಂಕ (ಸಂ.5, ಪ.159). ಈ ಪದ್ಯಗಳಲ್ಲಿಯ 'ಗೌರವಕಾವ್ಯ' 'ಗೌರವನವ್ಯ ಕಾವ್ಯ' ಮುಂತಾದ ಉಲ್ಲೇಖಗಳು ಮೋಳಿಗೆಯ್ಯನ ಪುರಾಣದ ಕರ್ತೃ ಗೌರವಾಂಕನೇ ಎಂಬುದಕ್ಕೆ ಇಂಬು ಕೊಡುತ್ತವೆ. ಮೋಳಿಗೆಯ್ಯನ ಪುರಾಣವನ್ನು ರಚಿಸಿದ ಗೌರವಾಂಕ ಮತ್ತು ಆತನ ಕೃತಿಯ ಬಗೆಗೆ ಕರ್ನಾಟಕ ಕವಿ ಚರಿತೆಯ ಮೂರೂ ಸಂಪುಟಗಳಲ್ಲಿ ಉಲ್ಲೇಖವಿಲ್ಲ.

ಕವಿ ಗೌರವಾಂಕ ಆಯ್ದುಕೊಂಡ ಕಥಾವಸ್ತು, ಪುರಾಣದ ಬಹುಲ ಭಾಗದಲ್ಲಿ ಮೈವೆತ್ತಿರುವ ಪುರಾತನ ಮತ್ತು ನೂತನ ಶರಣ ಸಂಕೀರ್ತನ, ಮತ್ತೆ ದೀಕ್ಷಾವಿಧಾನ, ಅಷ್ಟಾವರಣ ಷಟ್ಸ್ಥಲಗಳ ನಿರೂಪಣೆಯಾಗಿದೆ. 'ಅಜಾತದೇಶಿಕ' ನೆಂಬ ಬಿರುದುಳ್ಳ ಹೊನ್ನವಳ್ಳಿಯ ಸಿದ್ಧವೀರೇಶನೇ ಕವಿ ಗೌರವನ ಗುರು. ಕವಿ ಗೌರವಾಂಕ ತನ್ನ ಮೋಳಿಗಯ್ಯನ ಪುರಾಣದಲ್ಲಿ ತನ್ನ ಊರನ್ನಾಗಲಿ ಇಲ್ಲವೆ ನಾಡನ್ನಾಗಲಿ ಹೇಳಿಲ್ಲ. ಅಂತೆಯೇ ಈತನಿದ್ದ ದೇಶದ ಬಗೆಗೆ ಪರೋಕ್ಷ ಪ್ರಮಾಣಗಳೇ ಏನಾದರೂ ತಿಳಿಸಬೇಕು.

ಹೊನ್ನವಳ್ಳಿಯ ಸಿದ್ಧವೀರೇಶ ಮತ್ತು ಕೊಳಗುಂದದ ಸಿದ್ಧಲಿಂಗೇಶ ಇವರೇ ಈ ಕೃತಿ ನಿರ್ಮಾಣಕ್ಕೆ ಮೂಲ ಕಾರಣರೆಂಬುದನ್ನು ಈ ಕಾವ್ಯವೇ ಸ್ಪಷ್ಟಪಡಿಸಿದೆ ಮತ್ತು ಸಿದ್ಧವೀರೇಶ ಹೊನ್ನವಳ್ಳಿಯೆಂಬ ಊರಿನವ ಮತ್ತು ಸಿದ್ಧಲಿಂಗೇಶ ಕೊಳಗುಂದದಾತ ಎಂದು ತಿಳಿದು ಬರುತ್ತದೆ. ಕವಿ ಹೊನ್ನವಳ್ಳಿ ಮತ್ತು ಕೊಳಗುಂದಗಳಿರುವ ನಾಡಿನವನೆಂಬ ಮಾತು ಸಿದ್ಧ ಸತ್ಯವೆನಿಸುತ್ತದೆ. ಈ ಹೊನ್ನವಳ್ಳಿಯು ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನಲ್ಲಿರುವ ಹೊನ್ನವಳ್ಳಿಯೇ ಆಗಿದೆ. ಕವಿ ಗೌರವಾಂಕ ಹಾಸನ ಮತ್ತು ತುಮಕೂರು ಜಿಲ್ಲೆಗಳ ನಡುವಣ ಊರಿನವನಿರಬೇಕೆಂದು ಹೇಳಬಹುದು. ಕವಿ ಮೈಸೂರು ನಾಡಿನವನೇ ಆಗಿರಬಹುದೆಂಬುದಕ್ಕೆ ಇನ್ನೂ ಕೆಲವು ಸಣ್ಣ ಸಣ್ಣ ಸಾಕ್ಷಿಗಳೂ ದೊರೆವಂತಿವೆ.

1. ಚಿತ್ರದುರ್ಗದ ಮಠದಿಂದ ದೊರೆತ ಮೋಳಿಗೆಯ್ಯನ ಪುರಾಣವನ್ನು ಪ್ರತಿಮಾಡಿದ ಸಂಕಣ ಪುರಾಣ ಸಮಾಪ್ತಿಯಾದ ಮೇಲೆ ಮೋಳಿಗೆಯ್ಯನ ಪುರಾಣದ ಬರದಾತನು 'ಕಿತ್ತನ ಕೆರೆ ಬಂಡೆಯನ್ನಮಗ ಸಂಕಣನ ಬರಹಾ'.... ಎಂದು ಹೇಳಿದ್ದಾನೆ. ಕಿತ್ತನ ಕೆರೆ ಇಲ್ಲವೆ ಕಿತ್ತಾನಕೆರೆ ಮೈಸೂರು ನಾಡಿನಲ್ಲಿದ್ದು, ಇಲ್ಲಿಯ

ಪ್ರತಿಕಾರ ಸಂಕಣ ತನ್ನ ನಾಡಿನ ಕವಿ ಗೌರವಾಂಕನ ಕಾವ್ಯವನ್ನು ಪ್ರತಿಮಾಡಿಕೊಟ್ಟದ್ದು. ಸಾವಿರಾರು ಸಾಂಗತ್ಯಪದಗಳನ್ನು ರಚಿಸಿದ ಕವಿ ಗೌರವಾಂಕ ಮತ್ತು ಆತನ ಕಾವ್ಯ ಮೋಳಿಗೆಯ್ಯನ ಪುರಾಣ ಅನಾಮಧೇಯರಾಗಿ ಅಜ್ಞಾತವಾಸದಲ್ಲಿದ್ದವರು. ಹೀಗೆ ಗೌರವಾಂಕನ ಕಾಲ ನಿರ್ಣಯ ಮಾಡುವಲ್ಲಿ ಪ್ರಬಲವಾದ ಅಂತರ ಇಲ್ಲದೆ ಬಾಹ್ಯ ಪ್ರಮಾಣಗಳ ಅಭಾವವಿದ್ದರೂ ಆತನಿದ್ದ ಕಾಲದ ಕಡೆಗೆ ಜಾಡು ತೋರಿಸುವ ಹಲ ಕೆಲವು ಸಂಗತಿಗಳು ಆತನ ಕಾವ್ಯದಲ್ಲಿವೆ.

ಮೋಳಿಗಯ್ಯನ ಪುರಾಣವನ್ನು ಬರೆದ ಈ ಕವಿ ಬಸವಣ್ಣನವರ (ಸು. 1160) ಸಮಕಾಲೀನನಾದ ಮೋಳಿಗೆಯ್ಯ ಇಲ್ಲವೆ ಮೋಳಿಗೆ ಮಾರಯ್ಯನಿಗಿಂತ ಈಚಿನವನೆಂಬ ಮಾತನ್ನು ಹೇಳುವ ಅವಶ್ಯಕತೆಯೇ ಇಲ್ಲ. ಹೊನ್ನವಳ್ಳಿಯ ಸಿದ್ಧವೀರೇಶ ಮತ್ತು ಕೊಳಗುಂದದ ಸಿದ್ಧಲಿಂಗೇಶ ಇವರು 15ನೆಯ ಶತಮಾನದ ಕೊನೆಯ ಭಾಗದಲ್ಲಿ ಇಲ್ಲವೆ 16ನೆಯ ಶತಮಾನದ ಪೂರ್ವಾರ್ಧದಲ್ಲಿದ್ದವರೆಂದು ಹೇಳಬೇಕಾಗುತ್ತದೆ. ಇನ್ನು ಕವಿ ಗೌರವಾಂಕ ಈ ಸಿದ್ಧವೀರೇಶ ಮತ್ತು ಸಿದ್ಧಲಿಂಗೇಶರ ಸಮಕಾಲೀನನೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಅಂತೆಯೇ ಕವಿ ಗೌರವಾಂಕ ಸು. ಕ್ರಿ.ಶ. 1525 ರಲ್ಲಿದ್ದನೆಂದು ಇಟ್ಟುಕೊಳ್ಳಬಹುದೆಂದು ಸಂ.ಶಿ.ಭೂಸನೂರಮಠ ಅವರು ಅಭಿಪ್ರಾಯ ಪಟ್ಟಿದ್ದಾರೆ. ಅವರ ಅಭಿಪ್ರಾಯವು ಸ್ವೀಕಾರಾರ್ಹವಾಗಿದೆ. ಈ ಕವಿ ಗೌರವಾಂಕ ಮೋಳಿಗೆಯ್ಯನ ಪುರಾಣವನ್ನುಳಿದು ಬೇರೆ ಮತ್ತಾವ ಗ್ರಂಥಗಳನ್ನೂ ರಚಿಸಿರುವುದರ ಬಗೆಗೆ ಯಾವುದೇ ಉಲ್ಲೇಖಗಳಿಲ್ಲ. ಮೋಳಿಗೆಯ್ಯನ ಪುರಾಣದ ಕಥಾವಸ್ತು ಚಿಕ್ಕದಾಗಿದ್ದರೂ ಈ ವಸ್ತು ಒಳಕೊಂಡಿರುವ ವಿಷಯ ಬಹಳ. ತನ್ನ ಕೃತಿ 'ಇದು ಸರ್ವ ಶರಣ ಸಂಕೀರ್ತನ, ಇದು ಪೌರಾಣ ವೇದಾದಿ ಶ್ರುತಿಗಳೊಳಗೊದವಿದ ಘನ ಪುಣ್ಯಸಾರ' ಎಂದು ಹೇಳುವ ಗೌರವಾಂಕ ಸಾಮಾನ್ಯವಾಗಿ ವೀರಶೈವ ಸಂಪ್ರದಾಯದ ಪುರಾಣಗಳಲ್ಲಿ ಬರುವ ಎಲ್ಲಾ ವಿಷಯಗಳನ್ನು ತನ್ನ ಕಾವ್ಯದಲ್ಲಿ ಸಂಕ್ಷಿಪ್ತವಾಗಿ ಇಲ್ಲದೆ ವಿಸ್ತಾರವಾಗಿ ಹೇಳಲು ಪ್ರಯತ್ನಿಸಿದ್ದಾರೆ.

**ಮೋಳಿಗೆಯ್ಯನ ಚರಿತೆಯಲ್ಲಿ ಅಂತರ್ಗತವಾಗಿರುವ ವಿಷಯಗಳು ಈ ಕೆಳಕಂಡಂತಿವೆ.**

1. ಅರವತ್ತು ಮೂರು ಶೈವ ಪುರಾತನರ ಚರಿತೆ.
2. ಸಪ್ತ ಮುಗ್ಧರ ಕಥೆ.
3. ನವ ಚೋಳರ ಕಥೆ.
4. ಬಸವಣ್ಣನ ಮಹಿಮೆ.
5. ಬಸವಣ್ಣನ ತೆತ್ತಿಗರ ಕಥೆ ಇತಿಹಾಸ ಪುರಾಣಾದಿಗಳಲ್ಲಿ ಬರುವ ರಾಮ, ಧರ್ಮರಾಯ, ಹರಿಶ್ಚಂದ್ರ, ಕುಮಾರರಾಮಾದಿಗಳ ಅನೇಕ ಪ್ರಾಸಂಗಿಕ ಕಥೆ.
6. ದೀಕ್ಷಾವಿಧಿ.
7. ಷಟ್ಸ್ಥಲ.

8. ಪಟಲ.
9. ಅಷ್ಟಾವರಣ.
10. ಶಿವ ಪಾರಮ್ಯ (ಏಕಾಂತರಾಮಯ್ಯನ ಕಥೆ).
11. ಶಿವಭಕ್ತ ಪಾರಮ್ಯ (ಶಿವನಾಗಮಯ್ಯನ ಕಥೆ).

ಈ ರೀತಿ ಶರಣರ ಚರಿತ್ರೆ, ಶರಣ ಧರ್ಮದ ಸಿದ್ಧಾಂತಗಳ ವಿಷಯಗಳನ್ನೆಲ್ಲಾ ತನ್ನ ಈ ಕೃತಿಯಲ್ಲಿ ಹೆಣೆಯಲು ಹವಣಿಸಿದ್ದಾರೆ. ಮೋಳಿಗೆಯ್ಯನ ಚರಿತೆಯನ್ನಷ್ಟೇ ನೋಡಿದರೆ ಅದೆಲ್ಲ ಕೂಡಿ ಕಾವ್ಯದ ಒಂದು ಮೂರಾಂಶದಷ್ಟು ಭಾಗವೆಂದು ಹೇಳಬಹುದು. ಸಾವಿರ ಸಾಂಗತ್ಯಪದಗಳ ಮೋಳಿಗೆಯ್ಯನ ಪುರಾಣವನ್ನು ವಿವೇಚಿಸಿದರೆ ಹಲವು ವರ್ಣನೆಗಳು ಸಮಯೋಚಿತವಾಗಿ ಮೂಡಿ ರಸಾವಿರ್ಭಾವಕ್ಕೆ ಕಾರಣವಾಗಿದ್ದರೆ, ಕೆಲವು ಔಚಿತ್ಯವಿಲ್ಲದೆ ತಲೆದೋರಿ ಕಾವ್ಯದ ಸೌಂದರ್ಯವನ್ನು ಮಸುಳಿಸುತ್ತವೆ. ಒಟ್ಟಾರೆ ಹೇಳುವುದಾದರೆ ಕವಿ ಗೌರವಾಂಕನಿಗೆ ವರ್ಣನೆಗಳ ನಿಜಸತ್ತ್ವವೇನೆಂಬುದು ಬಹುಮಟ್ಟಿಗೆ ಗೊತ್ತಿದೆ. ಈ ಕಾವ್ಯದ ಶೈಲಿಯಲ್ಲಿ ಒಡೆದು ಕಾಣುವ ಮಾಧುರ್ಯ, ಅರ್ಥವ್ಯಕ್ತಿ, ಸಮತೆ, ಮುಂತಾದ ಹಲಕೆಲವು ಗುಣಗಳಿವೆ. ಮತ್ತು ಸಂಸ್ಕೃತ ಶಬ್ದಗಳ ಬಾಹುಳ್ಯವಾಗಲಿ ಉದ್ದುದ್ದ ಸಮಾಸ, ಅರ್ಥಶಾಸ್ತ್ರದ, ಕಲ್ಪನೋಕ್ತಿಗಳ ಸುಳಿವಿಲ್ಲ. ಈ ಕಾವ್ಯದಲ್ಲಿ ಸಂದರ್ಭೋಚಿತವಾದ ಸಂಭಾಷಣೆಗಳೂ ಅಲ್ಲಲ್ಲಿ ಮೈವೆತ್ತಿವೆ. ಶೃಂಗಾರ ಮೊದಲಾದ ನವರಸಗಳೆಲ್ಲಾ ಇಲ್ಲಿ ಚಿತ್ರಿತವಾಗಿವೆ ಎಂದು ಹೇಳಲಿಕ್ಕೆ ಬರದಿದ್ದರೂ ಶೃಂಗಾರ, ವೀರ, ಕರುಣ, ಹಾಸ್ಯ, ಅದ್ಭುತ ಮುಂತಾದ ರಸಗಳು ಸ್ವತಂತ್ರವಾಗಿ, ಹೆಚ್ಚಾಗಿ ಭಕ್ತಿರಸಕ್ಕೆ – ಭಕ್ತಿಯೆಂಬುದು ಒಂದು ರಸವೆಂದಿಟ್ಟುಕೊಂಡರೆ – ಅಂಗವಾಗಿ ಅಲ್ಲಲ್ಲಿ ಮೈದೋರಿವೆ. ಆದರೆ ಈ ಮೊದಲೆ ತಿಳಿಸಿದಂತೆ ಮೋಳಿಗೆಯ್ಯನ ಪುರಾಣದಲ್ಲಿ ಪ್ರಧಾನವಾದುದು ಭಕ್ತಿರಸವೇ ಎಂಬುದು ನಿರ್ವಿವಾದವಾದ ಸಂಗತಿ ಎಂಬ ಸಂ.ಶಿ.ಭೂಸನೂರಮಠ ಅವರ ಹೇಳಿಕೆಯನ್ನು ಒಪ್ಪಬಹುದಾಗಿದೆ.

ಮೋಳಿಗೆಯ್ಯನ ಪುರಾಣದಲ್ಲಿ ಸಾಂಗತ್ಯಪದಗಳಲ್ಲದೆ ಕಂದ–ವೃತ್ತಗಳು ಸಂಧಿಯ ಪ್ರಾರಂಭದಲ್ಲಿ ಇಲ್ಲವೆ ಕೊನೆಗೆ ಬರುತ್ತವೆ. ಮತ್ತು 4ನೆಯ ಸಂಧಿಯಲ್ಲಿ ಸಂಸ್ಕೃತ ಶ್ಲೋಕಗಳೂ ಬಂದಿವೆ. ವೈವಿಧ್ಯಕ್ಕಾಗಿ ಇಲ್ಲವೆ ಪ್ರಾಮಾಣ್ಯಕ್ಕಾಗಿ ಸಾಂಗತ್ಯ ಕವಿಗಳು ಕಂದ–ವೃತ್ತ, ಷಟ್ಪದಿ, ಶ್ಲೋಕಗಳನ್ನು ತಮ್ಮ ಶಬ್ದದಲ್ಲಿ ಸೇರಿಸುವ ರೂಢಿಯನ್ನು ಕೆಲವು ಸಾಂಗತ್ಯ ಕವಿಗಳು ಮಾಡಿದ್ದಾರೆ. ಇದ್ದಿರಬಹುದು. ಆದುದರಿಂದ ಈ ಪದ್ಧತಿ ಕವಿ ಗೌರವಾಂಕನಿಗೇ ಹೊಸತೆಂದು ಹೇಳಬೇಕಿಲ್ಲ. ಕವಿ ಗೌರವಾಂಕನ ಕಾಲ ನಿರ್ಣಯದ ಸಂದರ್ಭದಲ್ಲಿ ನೋಡಿದಂತೆ ಈತ ಮಲ್ಹಣ, ಕಾಳಿದಾಸ ಮತ್ತು ಪಾಲ್ಕುರಿಕೆಯ ಸೋಮನಾಥ, ಹರಿಹರ, ಕೆರೆಯ ಪದ್ಮರಸರನ್ನು ಸ್ಮರಿಸಿದ್ದಾನೆ. ಸಂಸ್ಕೃತ ಕವಿಗಳಾದ ಮಲ್ಹಣ, ಕಾಳಿದಾಸರ ಪ್ರಭಾವ ಗೌರವಾಂಕನ ಮೇಲಾಗಿದೆ ಎಂದು ಹೇಳುವುದು ಕಷ್ಟ. ಆದರೆ ಹರಿದೇವ, ಪಾಲ್ಕುರಿಕೆ ಸೋಮನಾಥನ ಪ್ರಭಾವ ಕವಿಯ

ಮೇಲೆ ಬೀರಿದೆ. ಬಸವಣ್ಣ–ಮಾರಯ್ಯನ ಸಂಘರ್ಷದ ಸನ್ನಿವೇಶವನ್ನು ಗೌರವಾಂಕ ತೆಲುಗು ಬಸವಪುರಾಣ ಇಲ್ಲವೆ ಅದನ್ನೆ ಅನುಸರಿಸಿದ ಭೀಮಕವಿಯ (1369) ಕನ್ನಡ ಬಸವಪುರಾಣವನ್ನು ಓದಿ ಸಾಂಗತ್ಯದಲ್ಲಿ ಅದನ್ನೆ ಪಡಿಮೂಡಿಸಿದಂತಿದೆ.

ಹೀಗೆ ಗೌರವಾಂಕನ ಮೋಳಿಗೆಯ್ಯನ ಪುರಾಣದಲ್ಲಿ ಹರಿಹರ, ಪಾಲ್ಕುರಿಕೆ ಸೋಮನಾಥರ ಪ್ರಭಾವ ಸ್ಪಷ್ಟವಾಗಿ ಕಾಣುತ್ತದೆ. ಮೋಳಿಗೆಯ್ಯನ ಪುರಾಣದ 4ನೆಯ ಸಂಧಿಯಲ್ಲಿ ಬರುವ ಶಿವನಾಗಮಯ್ಯನ ಕಥೆಯ ಸಂದರ್ಭದಲ್ಲಿ ಗೌತಮ ಋಷಿ ಬ್ರಾಹ್ಮಣರಿಗೆ ಶಾಪವಿತ್ತ ಕಥೆ, ಅಲ್ಲಿಯ ಯಜ್ಞವೈಭವ ಕಾಂಡ, ಶೈವ ಪುರಾಣ, ಸ್ಕಂದ ಪುರಾಣ ಮುಂತಾದ ಪ್ರಮಾಣ ಗ್ರಂಥಗಳ ಸಾಕ್ಷಿಯ ವಚನಗಳನ್ನು, ಅದೇ ಸಂಗತಿಯನ್ನು ವಿವರಿಸುವ ಗುಬ್ಬಿಯ ಮಲ್ಲಣಾರ್ಯನ (ಸು. 1513) ವೀರಶೈವಾಮೃತ ಪುರಾಣದ 4ನೆಯ ಕಾಂಡ 2ನೆಯ ಸಂಧಿಯೊಡನೆ ಹೋಲಿಸಿದರೆ ಗೌರವಾಂಕ ವೀರಶೈವಾಮೃತ ಪುರಾಣದ ಕರ್ತೃ ಗುಬ್ಬಿಯ ಮಲ್ಲಣಾರ್ಯನಿಗೆ ಋಣಿಯಾಗಿರ ಬೇಕೆಂದೆನಿಸುತ್ತದೆ. ಮೋಳಿಗೆಯ ಮಾರಯ್ಯ ಮತ್ತು ರಾಣಿ ಮಹಾದೇವಿಯರ ವಚನಗಳ ಅಭ್ಯಾಸ ಮಾಡುವಾಗ, ಅವರ ಜೀವನ ಚರಿತೆ ತಿಳಿಯಲು 'ಮೋಳಿಗೆಯ್ಯನ ಪುರಾಣ' ಕೃತಿಯು ಸಹಕಾರಿಯಾಗಿದೆ.

ಮೋಳಿಗೆಯ್ಯನ ಪುರಾಣದ ಕಥಾವಸ್ತು ಚಿಕ್ಕದು. ಆದರೆ ಈ ವಸ್ತು ಒಳಗೊಳ್ಳುವ ವಿಷಯ ಬಹಳ. ತನ್ನ ಕೃತಿ 'ಇದು ಸರ್ವ ಶರಣ ಸಂಕೀರ್ತನ, ಇದು ಪುರಾಣ ವೇದಾದಿ ಶ್ರುತಿಗಳೊಳಗೊದವಿದ ಘನ ಪುಣ್ಯಸಾರ' ಎಂದು ಹೇಳುವ ಗೌರವಾಂಕ ಸಾಮಾನ್ಯವಾಗಿ ವೀರಶೈವ ಸಂಪ್ರದಾಯದ ಪುರಾಣಗಳಲ್ಲಿ ಬರುವ ಎಲ್ಲ ವಿಷಯಗಳನ್ನು ತನ್ನ ಕಾವ್ಯದಲ್ಲಿ ಸಂಕ್ಷಿಪ್ತವಾಗಿ ಇಲ್ಲವೆ ವಿಸ್ತಾರವಾಗಿ ಹೇಳಲು ಯತ್ನಿಸಿದ್ದಾನೆ.

ಸಾವಿರ ಸಾಂಗತ್ಯಪದಗಳ ಈ ಚಿಕ್ಕ ಕೃತಿಯಲ್ಲಿ ಚರಿತೆ ಮುಗಿದಂತಿದೆ, ಈ ಚರಿತೆ ಬರುವುದು ಮೊದಲ ಸಂಧಿ, ಕೊನೆಯ ಸಂಧಿ ಮತ್ತು ನಾಲ್ಕನೆಯ ಸಂಧಿಯ ತುತ್ತ ತುದಿಯಲ್ಲಿ. ಕಾವ್ಯದ ಉಳಿದೆಲ್ಲ ಭಾಗ ಮೇಲೆ ತಿಳಿಸಿದ ಅನೇಕ ವಿಷಯಗಳಿಗೆ ಮೀಸಲಾಗಿದೆ ಎಂದು ಹೇಳಬಹುದು. ಮುಖ್ಯಚರಿತೆಯಲ್ಲಿ ಇಷ್ಟೆಲ್ಲ ವಿಷಯಗಳನ್ನು ಸೇರಿಸಲು ಕವಿ ತ್ರಿಕಾಲ ಜ್ಞಾನಿಯಾದ ಪೌರಾಣಿಕ ಪಾತ್ರವನ್ನು ನಿರ್ಮಿಸಿ ಆತನ ಮುಖದಿಂದ ಎಲ್ಲ ವಿಷಯಗಳನ್ನು ಹೇಳುತ್ತಾನೆ. ಕಾವ್ಯದ ದೃಷ್ಟಿಗೆ ಸರಿತೋರದ ಇಂತಹ ವಸ್ತುರಚನೆ ಧರ್ಮದ ಕಣ್ಣಿಗೆ ಇದೊಂದು ನೈಪುಣ್ಯವೆಂದೇ ತೋರಬಹುದು. ಇನ್ನು ಕತೆ ಹೇಳುವಲ್ಲಿ ಕವಿ ಸಾಕಷ್ಟು ಜಾಣ್ಮೆಯನ್ನು ತೋರಿದ್ದಾನೆ. ಶೈವ ಪುರಾತನರ ಚರಿತೆಗಳನ್ನು ಒಂದೊಂದು ಪದ್ಯ ಇಲ್ಲವೆ ಅರ್ಧ ಪದ್ಯದಲ್ಲಿ ಹೇಳಿದರೆ ಕೆಲವು ಚರಿತೆಗಳನ್ನು ಹತ್ತಿಪ್ಪತ್ತು ಪದ್ಯಗಳಲ್ಲೂ ಹೇಳಬಲ್ಲ. ಬಸವಣ್ಣನವರ ಘನತೆಯನ್ನು ಸುಮಾರು ಐವತ್ತು ಪದ್ಯಗಳಲ್ಲಿ ಕೊಂಡಾಡಿದ್ದಾನೆ. ಅದೇ ರೀತಿ ಶಿವ ನಾಗಮಯ್ಯ,

ಏಕಾಂತರಾಮಯ್ಯನವರ ಕಥೆಗಳನ್ನು ಅರವತ್ತು ಎಪ್ಪತ್ತು ಪದ್ಯಗಳವರೆಗೆ ಉದ್ದೇಶ ಪೂರ್ವಕವಾಗಿ ಬೆಳೆಸಿದ್ದಾನೆ. ಎಲ್ಲ ಕಥೆಗಳಲ್ಲಿ ಒಂದು ಮಾತು ಎದ್ದು ನಿಲ್ಲುತ್ತದೆ. ಕವಿ ಕಥೆಗಳನ್ನು ನೈಜವಾಗಿ, ಸುಂದರವಾಗಿ, ಸರಸವಾಗಿ, ಹೃದಯಂಗಮವಾಗಿ ಹೇಳಬಲ್ಲ. ಭೂವರ ಪೌರಾಣಿಯನ್ನು ನಿರ್ಭರಾನಂದ ಭಕ್ತಿಯಿಂದ ಕೊಂಡಾಡಿದಂತೆ ಸಹೃದಯರಿಗೂ ಕವಿ ಗೌರವಾಂಕನನ್ನು ಮನಸಾರೆ ಹೊಗಳಬೇಕೆನಿಸುತ್ತದೆ. ನಾಲ್ಕನೆಯ ಸಂಧಿಯಲ್ಲಿ ಬರುವ ಬಸವಣ್ಣನವರ ಪವಾಡಗಳು, ಶಿವನಾಗಮಯ್ಯ ಮತ್ತು ಏಕಾಂತರಾಮಯ್ಯನ ಚರಿತೆಗಳಲ್ಲಿ ನಿರೂಪಿತವಾಗಿರುವ, ವಾದಪ್ರಸಂಗಗಳನ್ನುಳಿದರೆ ಗೌರವಾಂಕನು ಹೇಳುವ ಕಥೆಗಳಲ್ಲಿ ಬೇಸರವೆಂಬ ಮಾತಿನ ಸುಳಿವಿಲ್ಲ. ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಗೌರವಾಂಕನೊಬ್ಬ ಇಲ್ಲಿಯವರೆಗೆ ಅಜ್ಞಾತ ಕವಿಯಾಗಿ ಉಳಿದಿದ್ದರೂ ಆತನ ಕಥಾ ಕಥನ ನೈಪುಣ್ಯ ಅಜ್ಞಾತವಾಸದಿಂದ ಆತನನ್ನು ಎತ್ತಿ ತೆಗೆದು ಕನ್ನಡ ರಸಕಾವ್ಯ ಪ್ರಪಂಚದಲ್ಲಿ ಒಂದು ಮಾನ್ಯ ಸ್ಥಾನವನ್ನು ಕಲ್ಪಿಸಿ ಕೊಡುವಂತಿದೆ. 'ಕಾವ್ಯ ಚಿಕ್ಕದಿದ್ದರೇನು ರಸಭರಿತವಾಗಿದ್ದರೆ ತೀರದೆ?' ಎಂಬ ಸಂ.ಶಿ.ಭೂಸನೂರಮಠ ಅವರ ಮಾತು ಕವಿಯ ಹಿರಿಮೆಯ ಬಗೆಗೆ ತಿಲಕಪ್ರಾಯವಾಗಿದೆ.

ಚಿಕ್ಕ ಸಾಂಗತ್ಯಪದ್ಯಗಳಲ್ಲಿ ಒಂದೊಂದು ಕಥೆಯನ್ನು ಸರಸವಾಗಿ ಲಲಿತವಾಗಿ ಹೇಳುವ ಕವಿ ಗೌರವಾಂಕನ ಶಕ್ತಿ ನವನವೋನ್ಮೇಷಶಾಲಿಯಾಗಿದೆ. ಮೆರೆಮಿಂಡ – ನಂಬಿಯರ ಕಥೆ, ದೀಪದ ಕಲಿಯಾರ ಕಥೆ, ಕಳಚೆಂಗು ಪೆರುಮಾಳ್, ಮೊನೆಯಿಡುವರ ಕಥೆ, ಕರಿಕಾಳಚೋಳ – ಮನುಜೇಂದ್ರ ಚೋಳರ ಕಥೆ, ಶಿವನಾಗಮಯ್ಯ – ಏಕಾಂತರಾಮಯ್ಯನವರ ಕಥೆ ಇಂತಿವೇ ಮೊದಲಾದವು ಮತ್ತು ನಂಬಿಯಣ್ಣ, ಏಕಾಂತರಾಮಯ್ಯ ಮುಂತಾದ ಕಥೆಗಳಲ್ಲಿ ಅಂತರ್ಗತವಾಗಿರುವ ಉಪಕಥೆಗಳನ್ನು ಪರಿಶೀಲಿಸಿದರೆ ಕವಿ ಗೌರವಾಂಕನ ಕಥೆ ಹೇಳುವ ಜಾಣ್ಮೆ ತನ್ನತಾನೇ ಮನದಟ್ಟಾಗುವಂತಿದೆ. ಈ ಕಥೆಗಳನ್ನು ಕೇಳುವಾಗ ಕೆಲ ಬಾರಿ ಮೂಲಚರಿತೆಯ ನೆನಹೇ ಉಳಿಯದೆ ಹೋಗಬಹುದು. ಆದರೆ ಮುಂದಿನ ಕಥೆ ಕೇಳುವ ಕುತೂಹಲ ಸಹೃದಯರಿಗೆ ಕುಗ್ಗುವುದಿಲ್ಲ. ಕವಿ ಗೌರವಾಂಕ, ಹಾಡುಗಬ್ಬ ಮತ್ತು ಭಾಜನಗಬ್ಬಕ್ಕೆ ಸುಲಭವಾಗಿ ಒಗ್ಗಿಕೊಳ್ಳುವ ಸಾಂಗತ್ಯ ಪ್ರಕಾರದಲ್ಲಿ ಕಾವ್ಯ ರಚಿಸುವುದರ ಮೂಲಕ ಮೋಳಿಗೆಯ್ಯನ ಚರಿತ್ರೆಯನ್ನು ಚಿರಸ್ಥಾಯಿಯಾಗಿಸಿದ್ದಾನೆ.

**2. ಹೊನ್ನವಳ್ಳಿಯ ಕರಿಸಿದ್ಧೇಶ್ವರ ಸ್ವಾಮಿ: (ಸುಮಾರು ಕ್ರಿ.ಶ. 1560)**

ತಿಪಟೂರು ತಾಲ್ಲೂಕಿನ ಹೊನ್ನವಳ್ಳಿಯವರಾದ ಇವರು ಪ್ರಬೋಧಚಂದ್ರೋದಯ ಕೃತಿಯನ್ನು ರಚಿಸಿದ್ದಾರೆ. ಇವರು ಮಠಾಧೀಶರು ಹೌದು. ಹೊನ್ನವಳ್ಳಿಯಲ್ಲಿ ಒಂದು ಮಠವನ್ನು ಸ್ಥಾಪಿಸಿದ್ದು, ಈ ಮಠವನ್ನು "ಶ್ರೀ ಕರಿಯಸಿದ್ಧೇಶಸ್ವಾಮಿ ಮಠ" ಎಂದೇ ಕರೆಯಲಾಗುತ್ತಿದೆ. "ಸೋಮಶೇಖರ ಮತ್ತು ಚಿತ್ರಶೇಖರರ ಕಾಲದಲ್ಲಿ ಅರಮನೆಯು ಸ್ಥಾಪಿತವಾಗಿತ್ತು. ನಾಯಕರು ತಮ್ಮ

ಈ ಅರಮನೆಯನ್ನು ಗುರುಗಳಿಗೆ ನೀಡಿ ಗುರುಮನೆಯನ್ನಾಗಿ ಮಾಡಿದರೆಂದು ಹೇಳುವ ಕಥೆ ಇದೆಯಾದರೂ ಇದಕ್ಕೆ ಸಂಬಂಧಪಟ್ಟ ಯಾವ ದಾಖಲೆಗಳೂ ಇಲ್ಲ" ಎಂದು ದಿ. ಎನ್. ಬಸವಾರಾಧ್ಯರು ಅಭಿಪ್ರಾಯ ಪಟ್ಟಿದ್ದಾರೆ. ಕರಿಯ ಸಿದ್ಧೇಶರು ಪವಾಡಪುರುಷರಾಗಿ ಆಧ್ಯಾತ್ಮ ಸಾಧಕರಾಗಿದ್ದರು. ಇವರ ವಿದ್ವತ್ತಿಗೆ ಮೆಚ್ಚಿ ಸೋಮಶೇಖರ ಮತ್ತು ಚಿತ್ರಶೇಖರರು ಗ್ರಾಮದ ಹೊರಗೆ ಅನುಷ್ಠಾನಕ್ಕೆ ಕುಳಿತಿದ್ದ ಗುರುಗಳನ್ನು ಹೊನ್ನವಳ್ಳಿಗೆ ಕರೆಸಿ ಅವರಿಗೆ ಮಠವನ್ನು ಕಟ್ಟಿಸಿಕೊಡುತ್ತಾರೆ. ಚರಮೂರ್ತಿಯಾದ ಕರಿಯಸಿದ್ಧೇಶರು ಇಲ್ಲಿ ನೆಲೆಸದೆ ಚಿತ್ರದುರ್ಗ ಜಿಲ್ಲೆಯ ರಾಮಗಿರಿಗೆ ಹೋಗುತ್ತಾರೆ. ಕರಿಯಸಿದ್ಧಸ್ವಾಮಿಗಳಿಗೆ ಕಟ್ಟಿಸಿದ್ದ ಮಠದಲ್ಲಿ ಗುರುಗಳು ಮುಂದುವರೆದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ. ಪವಾಡಪುರುಷರಾದ ಕರಿಯಸಿದ್ಧೇಶ್ವರರು ಮಾಡಿರುವ ಒಂಬತ್ತು ಪವಾಡಗಳನ್ನು ಕ್ರಿ.ಶ. ಸುಮಾರು 1610 ರಲ್ಲಿದ್ದ ಪ್ರಸನ್ನ ದೇಶಿಕ ಎಂಬುವವರು ತಾರಾವಳಿ ಸಾಹಿತ್ಯ ಪ್ರಕಾರದಲ್ಲಿ ಬರೆದಿದ್ದಾರೆ. ಚರಮೂರ್ತಿಗಳಾದ ಕರಿಯಸಿದ್ಧೇಶಸ್ವಾಮಿಗಳು ಹೊನ್ನವಳ್ಳಿಯಲ್ಲಿದ್ದ ಅರಮನೆಯನ್ನೂ ಮಠವನ್ನೂ ಬಿಟ್ಟು ಚಿತ್ರದುರ್ಗ ಜಿಲ್ಲೆಯ ರಾಮಗಿರಿಗೆ ಹೋದದ್ದಾದರೂ ಏಕೆ? ತಮ್ಮ ಪ್ರಬೋಧಚಂದ್ರೋದಯವನ್ನು ಬರೆದಿದ್ದಾದರೂ ಎಲ್ಲಿ? ಎಂಬ ಪ್ರಶ್ನೆಗಳು ಸಹಜವಾಗಿಯೇ ಉದ್ಭವಿಸುತ್ತವೆ. ಅದಕ್ಕೆ ಕಾರಣ ಈ ಮುಂದಿನಂತಿರಬಹುದು. ರಾಮಗಿರಿಯ ಸಿದ್ಧಲಿಂಗ, ಸಿದ್ಧೇಶ್ವರರ ಆರಾಧ್ಯದೈವ. ಪ್ರಬೋಧಚಂದ್ರೋದಯದ ಆದ್ಯಂತ ತಮ್ಮ ಇಷ್ಟದೈವವನ್ನು ಕೊಂಡಾಡಿದ್ದಾರೆ. ಮೊದಲನೆಯ ಸಂಧಿಯ ಮೊದಲ ಪದ್ಯ "ಶ್ರೀಮದುಮೆವರಾ ಮಳೇಂದು ತಾಮರಸಸಖಾನಲಾಕ್ಷ ಕಾಮಕಾಲ ಪುರವಿಹರಣಭೋಗಿಭೂಷಣ ನಾಮರೂಪ ಕ್ರಿಯಾರಹಿತ ರಾಮಶೈಲಸಿದ್ಧಲಿಂಗ ಪ್ರೇಮದಿಂದಲೀವು" ಎಂದೂ (1–56) 'ಫಲಶ್ರುತಿ'ಯಲ್ಲಿ"ಇದನನುಶ್ರುತದಲ್ಲಿ ಓದಿದಾತನೆ ಅಜಾತ ನಿಂತಿದನರ್ಥೈಪ ಯುಕುತ ಮುಕುತ ನಿದು ತನ್ನ ಹೃದಯವೆಂದರಿದಾತ ರಾಮಶೈಲಾಧಿಪತಿ ಸಿದ್ಧಲಿಂಗನೆಯಾಗಿಹಂ" – ಇವು ಇಷ್ಟೇ ಅಲ್ಲದೆ ಕಾವ್ಯದಲ್ಲಿ ಹಲವಾರು ಕಡೆಗಳಲ್ಲಿ ತಮ್ಮ ಇಷ್ಟದೈವವಾದ ಸಿದ್ಧಲಿಂಗನನ್ನು ವಿನೀತಭಾವದಿಂದ ಸ್ತುತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಇವೆಲ್ಲದರ ಹಿನ್ನೆಲೆಯಲ್ಲಿ ಕರಿಯಸಿದ್ಧೇಶ್ವರರು ಪ್ರಬೋಧಚಂದ್ರೋದಯವನ್ನು ರಾಮಗಿರಿಯಲ್ಲೇ ಬರೆದಿರಬೇಕೆಂಬ ನಿಲುವು ಸಂಶೋಧಕರಿಂದ ವ್ಯಕ್ತವಾಗಿದೆ.

ಕರಿಯ ಸಿದ್ಧೇಶರು ಪ್ರಬೋಧಚಂದ್ರೋದಯದಲ್ಲಿ ಅದರ ರಚನೆಯ ಕಾಲವನ್ನು ಎಲ್ಲಿಯೂ ಹೇಳಿಕೊಂಡಿಲ್ಲ. ಆದರೆ ಹೊನ್ನವಳ್ಳಿಯಲ್ಲಿ ಕರಿಯ ಸಿದ್ಧೇಶರಿಗೆ ಅರಮನೆಯನ್ನೂ ಮಠವನ್ನೂ ಚಿತ್ರದುರ್ಗದ ಪಾಳೆಯಗಾರರಾದ ಚಿತ್ರಶೇಖರ ಮತ್ತು ಸೋಮಶೇಖರ ಅವರು ಕಟ್ಟಿಸಿಕೊಟ್ಟಿರುವ ವಿಷಯ ದಾಖಲಾಗಿದೆ. ಜೊತೆಗೆ ಈ ಕೃತಿಯನ್ನು ಪ್ರತಿ ಮಾಡಿದವರು ಅದರ ಕಾಲವನ್ನು "ರಕ್ತಾಕ್ಷಿ ಸಂವತ್ಸರದ ಫಾಲ್ಗುಣ ಬಹುಳ 10 ಸೋಮವಾರದಲ್ಲೂ ಕಾರಗನಹಳ್ಳಿಯ ಬಸವರಾಜೊಡೆಯರು ಬರೆದ

ಪ್ರಬೋಧಚಂದ್ರೋದಯ ಸಮಾಪ್ತ ಮಂಗಳಮಹಾಶ್ರೀ" ಎಂದು ಹೇಳಿದ್ದಾರೆ. ಈ ಕೃತಿಯಲ್ಲಿ ಶಕಟರೇಫವನ್ನೂ ಬಳಸಲಾಗಿದೆ. ನಡುಗನ್ನಡ ಶೈಲಿಯಲ್ಲಿ ರಚಿತವಾಗಿರುವ ಈ ಕೃತಿಯ ಕಾಲವನ್ನು ಎನ್. ಬಸವಾರಾಧ್ಯರು ಸೂಚಿಸಿರುವ ಕ್ರಿ.ಶ. ಸುಮಾರು 1560 ಎಂಬುದನ್ನು ಮುಂದಿನ ಆಕರಗಳು ದೊರೆಯುವವರೆಗೂ ಇಟ್ಟುಕೊಳ್ಳಬಹುದಾಗಿದೆ.

**ಕೃತಿ ಪರಿಚಯ:**

ಕರಿಯ ಸಿದ್ಧೇಶರ ಪ್ರಬೋಧಚಂದ್ರೋದಯ ಕೃತಿಯು ವಿವಿಧ ಷಟ್ಪದಿ ಪ್ರಕಾರಗಳಲ್ಲಿ ರಚಿತವಾಗಿದೆ. "ಇಂತೀ ಪ್ರಬೋಧಚಂದ್ರೋದಯದ ಕಥೆ ಪೂರ್ಣವಾಯಿತು. ಇಹುದು ಹನ್ನೊಂದು ಸಂಧಿ, ಪದ ಸಾಸಿರದ ಮುಂತೆಸೆವ ನೂತೊಂಭತ್ತೊಂಭತ್ತು: ಶುಭಮಸ್ತು ಕಲ್ಯಾಣಮಸ್ತು" (ಸಂಧಿ 11, ಫಲಶ್ರುತಿ 1) ಎಂಬ ಕವಿಯ ಹೇಳಿಕೆಯಿಂದ ಈ ಕೃತಿಯಲ್ಲಿ ಒಟ್ಟು ಹನ್ನೊಂದು ಸಂಧಿಗಳು ಮತ್ತು ಒಂದು ಸಾವಿರದ ನೂರತೊಂಬತ್ತೊಂಬತ್ತು ಪದ್ಯಗಳೂ ಇರುವುದು ತಿಳಿದು ಬರುತ್ತದೆ. ಇವುಗಳಲ್ಲಿ ಒಂದರಿಂದ ಏಳನೆಯ ಸಂಧಿ ಮತ್ತು ಹತ್ತನೆಯ ಸಂಧಿ ಭೋಗಷಟ್ಪದಿಗಳಲ್ಲಿಯೂ ಎಂಟು ಮತ್ತು ಒಂಭತ್ತನೆಯ ಸಂಧಿಗಳು ಭಾಮಿನೀ ಷಟ್ಪದಿಗಳಲ್ಲಿಯೂ, ಹನ್ನೊಂದನೆಯ ಸಂಧಿ ವಾರ್ಧಕ ಷಟ್ಪದಿಯಲ್ಲಿಯೂ ರಚಿತವಾಗಿದೆ. ಈ ಕೃತಿಯ ಪ್ರಾರಂಭದಲ್ಲಿ ಕವಿ ತನ್ನ ಗುರುವಾದ ರಾಮಶೈಲದ ಸಿದ್ಧಲಿಂಗನನ್ನು ಪರಿಪರಿಯಾಗಿ ಸ್ತುತಿಸಿದ್ದಾರೆ. ತರುವಾಯ ಶಿವನನ್ನು ಕೂಡಿಕೊಂಡಿರುವ ನಂದಿ–ಭೃಂಗಿ, ವೀರಭದ್ರ, ಸ್ಕಂದ ಮೊದಲಾದವರನ್ನು ನೆನೆದು ಇವರೆಲ್ಲ ತನ್ನ ನಾಲಗೆಯ ಮೇಲೆ ನೆಲೆಸಿದುದರಿಂದ ಕಾವ್ಯರಚನೆಗೆ ತೊಡಗಿದುದಾಗಿ ಹೇಳಿಕೊಂಡಿದ್ದಾನೆ.

ಅಲ್ಲಮಪ್ರಭು, ಬಸವೇಶ, ನಾನಾಪರಿಗಳಿಂದ ಹರನನ್ನು ನುತಿಸಿದರಾದರೂ ಹರನನ್ನು ಸೇರಿದವರೂ ಇವರನ್ನೆಲ್ಲಾ ನೆನೆಸಿದ್ದಾರೆ. ಛಂದಸ್ಸು, ವ್ಯಾಕರಣ ಅಲಂಕಾರಗಳನ್ನು ತಿಳಿಯದ ಮಂದಮತಿಯ ಕೃತಿಯಲ್ಲಿನ ಅವಗುಣಗಳನ್ನು ಸುಗುಣಗಳು ನೋಡಲಿ ಎಂದಿದ್ದಾರೆ. ಈ ನನ್ನ ತೊದಲು ನುಡಿ ಶಿವಶರಣರಿಗೆ ಮಾತ್ರವೇ ಸಲ್ಲುತ್ತದೆ ಎಂದಿದ್ದಾರೆ. ಶ್ರುತಿ ಸ್ಮೃತಿ ಇತಿಹಾಸವೇ ಮೊದಲಾದ ಪುರಾಣಾಗಮಗಳೆಂಬ ಕುಸುಮ ಪರಾಗವನ್ನು ಸೇವಿಸುವ ಭೋಗ ಎಂಬ ದುಂಬಿಗಳು ಈ ಷಟ್ಪದಿಗಳು. ಇದು ನರರ, ಸುರರ, ಸತಿ–ಲತೆ, ತರು, ಪುರ, ಖಗ, ಮೃಗ ಮುಂತಾದವುಗಳನ್ನು ಹೇಳುವ ಕೃತಿಯಲ್ಲ, ಆತ್ಮಜ್ಞಾನ ಮುಕ್ತಿಯನ್ನೀವ ಪ್ರಬೋಧಚಂದ್ರ ಹೆಸರಿನ ನಾಟಕ. ಈ ಪ್ರಬೋಧಚಂದ್ರೋದಯ ಶಿವೈಕ್ಯ ಜನದ ಹೃದಯ. ಇದು ಆಗಮ ಪುರಾಣ ಸಮುದ್ರದಿಂದ ಉದಿಸಿತು: ಇದರ ಕಥಾ ಸೂತ್ರವೆಂತೆನೆ: "ಅಣೋರಣೀಯಾನ್ ಮಹತೋ ಮಹೀಯಾನ್ ಎಂದೆನಿಸುವ ಆ ಮಹಾ ಪರಶಿವನೇ ತನ್ನ ಲೀಲೆಗೋಸುಗರ ಪಂಚಕೃತ್ಯವಂ ನಟಿಸುತ್ತ ಅನುಗ್ರಹ

ಕೃತಾರ್ಥವಾಗಿ ಗುರುರೂಪಮನಾಂತಿರ್ದ ಭೇದವೆಂತಿರ್ದುದೆನೆ... ಗುರುರೂಪೋ ಮಹೇಶ್ವರಃ ಇಂತೆಂದು ದೇವಿಗೆ ಗೊರೆದ ಶ್ರುತ್ಯರ್ಥವಂ ಜಗತ್ತಿಗೆ ಉಂಟುಮಾಡಬೇಕೆಂದು ಮರ್ತ್ಯರೂಪಮಂ ತಳೆದು ಇಳಾ ಮರ್ತ್ಯರ ಭವಾರಣ್ಯಮಂ ಸುಟ್ಟು ಕರಿದೊರಸಿ ಹಾಯಿಕುವುದಕ್ಕೆ ತಾನೆ ಸಿದ್ಧನಾದುದರಿಂದ ಕರಿಯಸಿದ್ಧೇಶ್ವರನೆಂಬ ನಾಮಮಂ ತಳೆದು... ಭರತಖಂಡದಲ್ಲಿ ಐವತ್ತಾರು ದೇಶದೊಳೊಪ್ಪುವ ಕನ್ನಡ ದೇಶವಾ ದೇಶಮಧ್ಯದೊಳ ಎಸವಡೆದ ಅಭಿರಾಮ ವಾದುದೆಂಬಂತೆ ಮೆರೆವ ರಾಮಗಿರಿಯಂ ಕಂಡು ಆ ನಗಾಗ್ರದಿ ವೈರಾಗ್ಯಮಂಟಪದೊಳು ಭಕ್ತಿಪೀಠದಿ ಜ್ಞಾನಜ್ಯೋತಿ ಪ್ರಕಾಶದಿಂ ಮುಹೂರ್ತಂಗೆಯ್ದಿರುತ್ತಿರೆ, ಮತ್ತಂ ಅಂತವರ ಹಸ್ತಸರೋಜಾತ್ಮರೂಮಪ್ಪ ಪೆದ್ದೇಶ್ವರಂ ದೇಶಾಂತರಂಗೆಯ್ದು ಬಂದು ಆ ಸದ್ಗುರುಮೂರ್ತಿಯಂ ಕಂಡು ಮಸ್ತಕಾಣಿಕೆಯನ್ನಿಟ್ಟು ಸಾಷ್ಟಾಂಗದಂಡ ಪ್ರಣಾಮಂ ಮಾಡಿ ಕರಕಮಲಂಗಳಂ ಮುಗಿದು ಭಯಭಕ್ತಿ ರಸಾನಂದ ಪುಳಕಂಗಳಿಂ ರೋಮಾಂಚನಂ ಗೂಡಿಗಟ್ಟಿ ನುತಿಸುತ್ತ ಬಿನ್ನಪಂಗೆಯ್ದು... ನಿಜಶಿಷ್ಯನ ಮುಖವೆಂಬ ಚಂದ್ರನಂ ನೋಡಿ... ಎಲೆ ಪೆದ್ದೇಶ್ವರಾ ನಿನ್ನ ವಿನಂತಿ ಅರ್ಥವಂ ಸಂತೃಪ್ತಿ ಬಡಿಸಿ ತೀರ್ಚಿದಪೆವು. ಪೂರ್ವದೊಳೊರ್ವ ಮನೋರಾಜನೆಂಬ ರಾಯಂ ಪ್ರಬೋಧಚಂದ್ರನೆಂಬ ಗುರುವಿನಿಂ ನಿಜಮುಕ್ತಿ ಪಡೆದಂದಾ ಆಧ್ಯಾತ್ಮ ವಿಚಾರ ಕಥೆಯುಂಟು. ಅದೆಂತೆಂದು ಕೇಳು"ದೆಂದು ನಿರೂಪಿಸುತಿರ್ದರ್." (ಸಂ.1–24ವ). ಈ ಕೃತಿಯ ಹನ್ನೊಂದು ಸಂಧಿಗಳಲ್ಲಿ ನಿರೂಪಿತವಾಗಿರುವ ವಿಷಯಗಳನ್ನು ಕೃತಿಯಲ್ಲಿ ನಿರೂಪಿತವಾಗಿರುವಂತೆಯೇ ಈ ಕೆಳಕಂಡಂತೆ ಕೊಡಲಾಗಿದೆ.

1. ಮಹಾಮೋಹ ಭೂಪತಿ ಕದನದಲ್ಲಿ ಮಾತೃವಿನ ತೀವ್ರಹದನ ಹೃದಯದಲ್ಲಿ ಬಲಿದು ಸದನದತ್ತ ನಡೆದ ಸಂಧಿಯಿದು ಮೊದಲಿನದು.
2. ಡಾಂಭ ಅಹಂಕಾರರು ಪುದಿದ ತೀರ್ಥಕ್ಷೇತ್ರವಾಸಕಧಿಕರಾ ವಿವೇಕ ಬರಸದೆ ಗೆಲಿದು ಬಂದ ಸಂಧಿಯಿದು ದ್ವಿತೀಯಲಿ.
3. ವಿವೇಕನಧಿಕತೆಯನು ಕಂಡ ಸಂಧಿಯಿದು ತೃತೀಯಲಿ.
4. ಮಹಾಮೋಹ ಪರಬಲದಧಿಕತೆಯನು ಕಂಡು ಗೆಲುವ ವಿಧ ಕಲಿಚಾರ್ವಾಕದೊಡನೆ ಪುದಿದು ದಂಡು ನಡೆದ ಸಂಧಿಯಿದು ಚತುರ್ಥದಿ.
5. ಮನವ ವಾಣಿ ಬೋಧಿಸಿ ಕದಲು ಕಳವಳಗಳ ಬಿಡಿಪ ಹಡಕೆಯಾ ವಿವೇಕ ಬಂದ ಪದದಿ ಪೂರ್ಣವಾದ ಸಂಧಿಯಿದುವೆ ಪಂಚಮಂ.
6. ಮನೋರಾಜ ಭವ ಭಯಂ ಅಧಿಕ ನೋವಿನಿಂದ ಗ್ರಸ್ತರಾಗಿ ಸದ್ಗುರುವಿನ ಕೃಪೆಯನೊದವಿಸುತಲಿರ್ದ ಸಂಧಿಯಿದುಮೆ ಷಷ್ಠಮಂ.
7. ಶ್ರೀಗುರುವಿನ ಅಜಾಂಡದುದಯವನ್ನಿಜಾತ್ಮನಿಗೆ ವಿಧಿಸಿ ವಿವರವಾಗಿ ಪೇಳ್ವ ಪದದಿ ಪೂರ್ಣಮಾದ ಸಂಧಿಯಿದುಮೆ ಸಪ್ತಮಂ.
8. ಶ್ರೀಶ ಲೋಕ ವರ್ಣನೆಯ ವಿಧಿಸಿ ಗುರುವು ನಿಜಸುತನ ಸದುಹೃದಯ ಸುಖಮಯ ನೆನಿಸಿ ಹೊರದೀ ಅಧಿಕತರವಹ ಸಂಧಿಯಪ್ಪಮದೆಡೆಯ ಸಂಬಂಧಿ.
9. ತತ್ತ್ವೋದಯವ ಪಿಂಡಾಂಡ ವಿಧವನೊರೆವನೊಲಿದು ಶಿಷ್ಯಗೆ ವಿಧಿಸಿ ಪೇಳಿದನೆಂದು ಪೇಳೀ ಪದದಿ ಪೂರಿತ ಸಂಧಿಯೊಂಭತ್ತನೆಯ ಸಂಬಂಧಿ.

10. ಶ್ರೀ ಗುರುವು ತನಯನಾ ಹೃದಯವನ್ನು ತಿಳುಹಿದಾತ್ಮಪದವ ತೋಟಿ ಲೌಕಿಕವನು ಕದಲಿಸಿ ಪೂರ್ಣಮಾದ ಸಂಧಿ ದಶಮದಿ.
11. ಮನೋರಾಜನಾ ವೀರಶೈವೋಪದೇಶವನೆ ಪಡೆದು ಅಧಿಕ ಮುಕ್ತಾಂಗನೆಯ ಸಮರಸದಿ ಸುಖಿಯಾದ ನಿದನರಿಯವಾತ್ಮವಿದು ಶರಸನ್ಮಾರ್ಗ ತಾನಿದೆನುತ್ತ ಕರಿಯಸಿದ್ಧೇಶ ಪೇಳಿದ ಸಂಧಿಯಿದುಮ ಏಕಾದಶದಲ್ಲಿ.

ಮೇಲಿನ ವಿಷಯಾನುಕ್ರಮಣಿಕೆಯಿಂದ ಈ ಕೃತಿಯು ಒಂದು ಪಕ್ಷಿನೋಟವನ್ನು ಪಡೆಯಬಹುದಾಗಿದೆ. ಪ್ರಸ್ತುತ ಉಪಲಬ್ಧ ಏಕೈಕ ಹಸ್ತಪ್ರತಿಯಿಂದ ಪ್ರಕಟವಾಗಿರುವ ಕೃತಿಯಲ್ಲಿ ಹಲವಾರು ಸ್ಖಾಲಿತ್ಯಗಳು ಸಂಭವಿಸಿವೆ. ಅಪಾರ ಸಂಸ್ಕೃತ ಜ್ಞಾನವನ್ನು ಹೊಂದಿದ್ದ ಕರಿಯಸಿದ್ಧೇಶರು ಕಷ್ಟವೂ ಕ್ಲಿಷ್ಟವೂ ಆದ ಪ್ರಾಸಸ್ಥಾನಗಳನ್ನು ಸಮರ್ಥವಾಗಿ, ಸಮರ್ಪಕವಾಗಿ ನಿರ್ವಹಿಸಿದ್ದಾರೆ. ಕರಿಯಸಿದ್ಧೇಶರು ಪ್ರತಿಭಾ ಸಂಪನ್ನರು; ಪ್ರಕಾಂಡ ಪಂಡಿತರು, ವರ್ಣನಾಪ್ರಿಯರು. ಶ್ರೀಗಳು ಪ್ರಾಚೀನ ನಿಯಮ ನಿಬಂಧನೆಗಳಿಗೇ ಕಟ್ಟು ಬೀಳದೆ ಧರ್ಮ ನಿರೂಪಣೆಯ ಸಂದರ್ಭದಲ್ಲಿ ಪ್ರಾಸ, ಛಂದಸ್ಸು, ಅಲಂಕಾರಗಳ ನಿಯಮಗಳನ್ನು ಕೆಲವೆಡೆ ಉಲ್ಲಂಘಿಸಿದ್ದಾರೆ. ಇದರಿಂದ ಕಾವ್ಯ ನಿರೂಪಣೆಗೆ ಯಾವ ಬಾಧಕವೂ ಇಲ್ಲ. ಕನ್ನಡ ದೇಸೀ ಛಂದಸ್ಸಿನಲ್ಲೇ ಅದರಲ್ಲೂ ಅಪೂರ್ವವಾಗಿ ಬಳಕೆಯಲ್ಲಿರುವ ಭೋಗಷಟ್ಪದಿಯಲ್ಲಿಯೇ ಈ ಕೃತಿಯನ್ನು ರಚಿಸಿರುವುದು ವಿಶೇಷವಾಗಿದೆ. ತಾವು ಪ್ರತಿಪಾದಿಸುವ ಧರ್ಮದ ಮೇಲಿನ ಅಪಾರ ಅಭಿಮಾನದಿಂದ ಅದನ್ನು ಪ್ರತಿಪಾದಿಸುವ ಭರದಲ್ಲಿ ಕೆಲವು ಕಡೆ ನಿಯಮಗಳು ಕೊಚ್ಚಿಕೊಂಡು ಹೋಗಿವೆ. ಈ ಕೃತಿ ಅನೇಕ ಶಿವಶರಣರ ಕಥೆಗಳನ್ನೂ, ಪ್ರಸಂಗಗಳನ್ನೂ ನಿರೂಪಿಸುವುದರ ಮೂಲಕ ಇದು ಒಂದು ಶಿವಶರಣ ಕಥಾ ರತ್ನಕೋಶ ಎಂದೆನಿಸಿದೆ. ಈ ಎಲ್ಲಾ ದೃಷ್ಟಿಗಳಿಂದ ಸುದೀರ್ಘ ಕಾಲದಿಂದ ಅಪ್ರಕಟಿತವಾಗಿದ್ದ ಪ್ರಬೋಧಚಂದ್ರೋದಯದ ಕೃತಿಯು ಪ್ರಕಟಗೊಳ್ಳುವುದರ ಮೂಲಕ ಸಹೃದಯ ಓದುಗರ ಮನವನ್ನು ಸ್ವಲ್ಪಮಟ್ಟಿಗೆ ಸೂರೆಗೊಂಡಿದೆ. ಪ್ರಬೋಧಚಂದ್ರೋದಯ ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಕೃತಿಯಾಗಿದ್ದು, ಈ ತೆರಹದ ಕೃತಿಗಳು ಕನ್ನಡದಲ್ಲಿ ಬಹುಶಃ ಇಲ್ಲವೆಂದರೂ ಸಲ್ಲುತ್ತದೆ. ಕವಿ ಇದನ್ನು ನಾಟಕ ಎಂದು ಕರೆದಿದ್ದಾನೆ. ಇದು ಒಂದು ಕಲ್ಪಿತ ನಾಟಕ, ಇದರಲ್ಲಿನ ಪಾತ್ರಗಳು ಸಾಂಕೇತಿಕವಾದವು. ಲೌಕಿಕ ಕವಿಯೂ ಆಧ್ಯಾತ್ಮಿಕ ಗುರುವೂ ಆಗಿರುವ ಕರಿಯ ಸಿದ್ಧೇಶರು ಲೌಕಿಕದ ಮೂಲಕ ಪಾರಮಾರ್ಥಿಕವನ್ನು ಬೋಧಿಸಿದ್ದಾರೆ. ಆದರೆ ಯಾವ ಲೌಕಿಕ ಪ್ರಲೋಭಗಳಿಗೂ ಒಳಗಾಗದೆ ಇಹಪರ ಸಾಧಕವಾದ ಕೃತಿಯನ್ನು ರಚಿಸಿ ಕೃತಾರ್ಥರಾಗಿದ್ದಾರೆ. ಷಟ್ಪದಿ ಪ್ರಕಾರಗಳಲ್ಲಿ ಅದರಲ್ಲಿಯೂ ವಿಶೇಷವಾಗಿ ಭೋಗಷಟ್ಪದಿಯಲ್ಲಿ ರಚಿತವಾಗಿರುವ ಈ ಕೃತಿಯ ಬಗೆಗೆ ವ್ಯವಸ್ಥಿತವಾದ ಅಧ್ಯಯನ ನಡೆದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗಬೇಕಾಗಿದೆ.

### 3. ಪ್ರಸನ್ನದೇಶಿಕನ ಹೊನ್ನವಳ್ಳಿ ಸಿದ್ಧೇಶ್ವರನ ಪವಾಡ (ಸು. ಕ್ರಿ.ಶ. 1610):

ಈತನು "ತಿಪಟೂರು ತಾಲ್ಲೂಕಿನ ಹೊನ್ನವಳ್ಳಿಯವನು. ಕಾಲ ಸು. 1610." ಈತನು ಹೊನ್ನವಳ್ಳಿ ಸಿದ್ಧೇಶ್ವರ ಪವಾಡ ಕೃತಿಯನ್ನು ರಚಿಸಿದ್ದಾನೆ. ಈ ಕೃತಿಯು ಪಲ್ಲವಿ ಸಹಿತವಾಗಿದ್ದು, 11 ನುಡಿಗಳನ್ನು ಹಾಗೂ ಅಂತ್ಯದಲ್ಲಿ 7 ಕಂದಗಳಿಂದ ಕೂಡಿದೆ. ಇದನ್ನು "ಹೊನ್ನವಳ್ಳಿ ಕರಿಸಿದ್ಧೇಶ್ವರ ಮಠದ ಸಂಗ್ರಹದಲ್ಲಿದ್ದ ಹಸ್ತಪ್ರತಿಯನ್ನು ಆಧರಿಸಿ ಎಸ್. ಶಿವಣ್ಣನವರು 'ಪರಂಜ್ಯೋತಿ' ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ."

ಮರಿರಾಚವಟೇಶನು ತನ್ನ 'ಪ್ರಭುನಟನತಾರಾವಳಿ'ಯಲ್ಲಿ 'ಪ್ರಸನ್ನದೇಶಿಕನ ಕುಮಾರನೆಂದೆನಿಸುವ ಮರಿರಾಚವಟೀಶ' (ನುಡಿ: 29) ಎಂದು ಕರೆದುಕೊಂಡಿರುವನು. ಇಲ್ಲಿ ಬರುವ ಪ್ರಸನ್ನದೇಶಿಕನು 'ಹೊನ್ನವಳ್ಳಿ ಸಿದ್ಧವೀರೇಶ್ವರನ ಪವಾಡ'ದ ಕರ್ತೃವೇ ಆಗಿರುವನು. ಈ ಕೃತಿಯ ಹನ್ನೊಂದನೇ ನುಡಿಯಲ್ಲಿ 'ತೋಂಟದೀಶನ ವರದ ಕುಮಾರನೆಂದೆನಿಪ ಪ್ರಸನ್ನದೇಶಿಕ' ಎಂದು ಕರೆದುಕೊಂಡಿರುವನು. ಗರುಣಿಯ ಬಸವಲಿಂಗನು ಹೊನ್ನವಳ್ಳಿ ಸಿದ್ಧವೀರೇಶ್ವರನನ್ನು ಸ್ತುತಿಸುವಂತೆ ತನ್ನನ್ನು ಕರೆದು ಹೇಳಿದ್ದರಿಂದ ತಾನು 'ಹೊನ್ನವಳ್ಳಿ ಸಿದ್ಧವೀರೇಶ್ವರನ ಪವಾಡ'ವನ್ನು ಬರೆದುದಾಗಿ ಪ್ರಸನ್ನದೇಶಿಕನು ತನ್ನ ಕೃತಿಯ ಕೊನೆಯ ಕಂದಪದ್ಯದಲ್ಲಿ ಹೇಳಿಕೊಂಡಿರುವನು. ಈ ಹಿನ್ನೆಲೆಯಲ್ಲಿ ಪ್ರಸನ್ನದೇಶಿಕ ಹಾಗೂ ಮರಿರಾಚವಟೀಶನು ಗುರು-ಶಿಷ್ಯರಾಗಿದ್ದು, ಇವರು ಗರುಣಿಯ ಬಸವಲಿಂಗನ ಶಿಷ್ಯರೆಂದು ಹೇಳಬಹುದು. ಪ್ರಸನ್ನದೇಶಿಕನು ತನ್ನನ್ನು 'ತೋಂಟದೀಶನ ವರದ ಕುಮಾರ' ಎಂದು ಕರೆದುಕೊಂಡಿರುವುದರಿಂದ ಮರಿರಾಚವಟೀಶನೂ ತನ್ನ ಗುರುವಿನಂತೆ ತೋಂಟದ ಸಿದ್ಧಲಿಂಗನ ಶಿಷ್ಯ ಪರಂಪರೆಗೆ ಸೇರಿದವನಾಗುವನು. ಈ ಕೃತಿಯು ಘನಮಹಿಮ ಸಿದ್ಧೇಶ್ವರನ ಸ್ತುತಿಯಾಗಿದ್ದು ಸಕಲ ಭಕ್ತ ಮಾಹೇಶ್ವರರ ಮುಖದಲ್ಲಿರಲಿ ಎಂದು ಈ ಘನಮಹಿಮ ಸಿದ್ಧವೀರೇಶ್ವರನ ಪವಾಡಗಳನ್ನು ಹೇಳುತ್ತಿರುವುದಾಗಿ ಕೃತಿಯ ಅಂತ್ಯದ ಎರಡನೆ ಕಂದಪದ್ಯದಲ್ಲಿ ತಿಳಿಸಿರುವನು. ಹನ್ನೊಂದು ನುಡಿಗಳನ್ನೊಳಗೊಂಡ 'ಹೊನ್ನವಳ್ಳಿ ಸಿದ್ಧವೀರೇಶ್ವರನ ಪವಾಡ'ವು ಕೃತಿಯ ಹೆಸರೇ ಹೇಳುವಂತೆ ಹೊನ್ನವಳ್ಳಿ ಸಿದ್ಧವೀರೇಶ್ವರನ ಪವಾಡಗಳಿಗೆ ಮೀಸಲಾದ ಕೃತಿ. ಹೊನ್ನವಳ್ಳಿಯ ಸಂಸ್ಕೃತ ರೂಪ 'ಕನಕಲತೆ'. ಕವಿಯು ತನ್ನ ಕೃತಿಯ ನಾಯಕ ಸಿದ್ಧವೀರೇಶನ ಅನಂತ ಮಹಿಮೆಯನ್ನು ಹೇಗೆ ಹೇಳಲಿ ಎಂದು ಪಲ್ಲವಿಯಲ್ಲಿ ನುಡಿದಿರುವನು. ಈ ಮಾತು ಸುಳ್ಳಲ್ಲ, ಈ ಕೃತಿ ಹೊನ್ನವಳ್ಳಿಯ ಸಿದ್ಧವೀರೇಶನು ಮಾಡಿದ ಹಲವು ಪವಾಡಗಳನ್ನು ಹೇಳುತ್ತಲಿದೆ. ಈ ಮಹಿಮಾಪುರುಷನು ಕೈಲಾಸದಿಂದ ಮರ್ತ್ಯಕ್ಕೆ ಇಳಿದುಬಂದು ಗುರು ಸಿದ್ಧವೀರೇಶನೆನ್ನುವ ಹೆಸರನ್ನು ಹೊಂದಿ ಅನೇಕ ಪವಾಡಗಳನ್ನು ಮಾಡಿದುದಾಗಿ ಕವಿ ಹೇಳುವನು. ಗುರು ಸಿದ್ಧವೀರೇಶನು ಎಂತಹ ಮಹಿಮಾಶಾಲಿಯೆಂದರೆ, ಶಿವನೇ ಪ್ರತ್ಯಕ್ಷನಾಗಿ ಸೋಮವಾರ ಕೈಲಾಸಕ್ಕೆ ಬಾ ಎಂದು ಆಹ್ವಾನವೀಯಲು, ನಿಮ್ಮನ್ನು ಭಜಿಸುವ ಭಕ್ತರಿಗೆ ಈ ವಿಚಾರ ತಿಳಿಸಿ ಗುರುವಾರ ಕೈಲಾಸಕ್ಕೆ ಬರುತ್ತೇವೆ ಎಂದು

ಹೇಳಿ ಆ ಪ್ರಕಾರವೇ ಕೈಲಾಸಕ್ಕೆ ಪುಷ್ಪಕ ವಿಮಾನದಲ್ಲಿ ತೆರಳಿದರು (ನುಡಿ: 8). ಹೊನ್ನವಳ್ಳಿಯ ಸಿದ್ಧವೀರೇಶ್ವರನು ಲೋಕವನ್ನು ತ್ಯಜಿಸಿ ಕೈಲಾಸಕ್ಕೆ ತೆರಳಿದ ಮೇಲೂ ಹಲವು ಪವಾಡ, ಮಹಿಮೆಗಳನ್ನು ತೋರಿದ ವಿವರ 9 ಮತ್ತು 10ನೇ ನುಡಿಗಳಲ್ಲಿ ಬಂದಿದೆ.

ತಾರಾವಳಿ ರೂಪದಲ್ಲಿರುವ ಈ ಕೃತಿಯ ಹನ್ನೊಂದನೆಯ ನುಡಿಯಲ್ಲಿ ತನ್ನ ಕಥಾನಾಯಕನ ಗುಣಗಾನ ಮಾಡಿರುವ ಪದ್ಯವನ್ನು ಓದುಗರು ಗಮನಿಸಬಹುದು. ಹೀಗೆ ಕ್ರಿ.ಶ. ಸು. 1610 ರಲ್ಲಿ ಹೊನ್ನವಳ್ಳಿಯಲ್ಲಿದ್ದ ಪ್ರಸನ್ನದೇಶಿಕನ ಈ ಕೃತಿಯೊಂದು ಮಾತ್ರ ಲಭ್ಯವಿದೆ. ಇದನ್ನು ಗಮನಿಸಿದರೆ ಈತ ಇನ್ನು ಹಲವು ಕೃತಿಗಳನ್ನು ರಚಿಸಿರಬಹುದು. ಆದರೆ ಅವು ಸದ್ಯಕ್ಕೆ ಉಪಲಬ್ಧವಿಲ್ಲ.

**4. ಕರಿವೃಷಭ ದೇಶೀಕೇಂದ್ರ ಸ್ವಾಮಿ: (ಕ್ರಿ.ಶ. ಸು. 1808)**

ಸಿದ್ಧೇಶ್ವರ ಸ್ವಾಮಿಗಳಿಗೆ ಹಾಗಲವಾಡಿ ಅರಸ ಇಮ್ಮಡಿ ಮುದಿಯಪ್ಪನಾಯಕನೆಂಬುವನು ನೊಣವಿನಕೆರೆಯ ಅರಣ್ಯದ ಮಧ್ಯದಲ್ಲಿ ಈ ಮಠವನ್ನು ನಿರ್ಮಿಸಿಕೊಟ್ಟು ಅವರ ಶಿಷ್ಯನಾದನೆಂದು ಹೇಳಲಾಗಿದೆ. ಅದು ಅಂದು ಕಾಡಿನ ಮಧ್ಯದಲ್ಲಿದ್ದುದರಿಂದ ಅದಕ್ಕೆ ಕಾಡಸಿದ್ಧೇಶ್ವರ ಮಠವೆಂದು ಹೆಸರಾಯಿತು. ಈ ಮಠ ತುಮಕೂರಿನ ಸೋಮೆಕಟ್ಟೆ ಮಠದ ಪರಂಪರೆಗೆ ಸೇರಿದೆ. ಕ್ರಿ.ಶ. 1808 ರಲ್ಲಿ ಅದರಂಗಿ ಗ್ರಾಮದಲ್ಲಿ ರಾಚಪ್ಪ ದೇವರ ಹಿರಿಯ ಪುತ್ರನಾಗಿ ಜನಿಸಿದ ಕರಿವೃಷಭ ದೇಶೀಕೇಂದ್ರ ಸ್ವಾಮಿಗಳು ಈ ಮಠಕ್ಕೆ ಮಠಾಧಿಪತಿಗಳಾಗಿ ಬಂದರು. ಇವರು ಮಠಾಧೀಶರಾಗಿ ಇದ್ದುಕೊಂಡೇ ಸಾಹಿತ್ಯ ಕೃಷಿ ಮಾಡಿದ್ದಾರೆ. ಇವರು ಒಟ್ಟು ಕೈವಲ್ಯಪದ್ಯಗಳು 56, ಅಷ್ಟಾವರಣ ತ್ರಿವಿಧಿಗಳು 32, ಅಷ್ಟೋತ್ತರ ಶತ ತ್ರಿವಿಧಿ – 108 ಇತ್ಯಾದಿ ಕೃತಿಗಳನ್ನು ಲಘು ಸಾಹಿತ್ಯ ಪ್ರಕಾರದಲ್ಲಿ ರಚಿಸಿದ್ದಾರೆ. ಹೊನ್ನುಡಿಕೆಯ ಹೆಚ್.ಆರ್. ಮಹಾಂತಯ್ಯನವರು ಇವರ ಸಮಗ್ರ ಸಾಹಿತ್ಯವನ್ನು ಸಂಪಾದಿಸಿ ಕ್ರಿ.ಶ. 1962 ರಲ್ಲಿ ನೊಣವಿನಕೆರೆ ಶ್ರೀ ಸೋಮೆಕಟ್ಟೆ ಶಿವಾನುಭವ ಸಾಹಿತ್ಯ ಎಂಬ ಶೀರ್ಷಿಕೆಯಡಿಯಲ್ಲಿ ಧಾರವಾಡದ ಮುರುಘಾ ಮಠದ ಮೂಲಕ ಪ್ರಕಟಿಸಿದ್ದಾರೆ.

ಬಸವೋತ್ತರ ಯುಗದ ಸ್ವರವಚನಗಳು ಹಾಡು, ಪದ, ಸ್ವರಪದ, ಅನುಭಾವ ಪದ, ತತ್ವ ಪದ, ಭಜನೆ ಪದ, ಏಕಾತಾರಿ ಪದ, ಕೈವಲ್ಯಪದ, ವೈರಾಗ್ಯ ಪದ ಮೊದಲಾದ ಹೆಸರುಗಳಿಂದಲೂ ಪ್ರಸಿದ್ಧಿ ಪಡೆದಿವೆ. ಹಾಗೆಯೇ ಇವು ಆಯಾ ಪ್ರದೇಶದ ಅನುಭಾವಿ ಶಿವಯೋಗಿ, ಶರಣ, ಮಠಾಧಿಪತಿ ಹಾಗೂ ಮಹಾತ್ಮರಿಂದ ರಚಿತವಾಗಿವೆ. ಇವುಗಳನ್ನು ವೀರಶೈವರಲ್ಲದೇ ವಿವಿಧ ಮತೀಯರು ಸ್ವರವಚನವನ್ನು ರಚಿಸಿದ್ದಾರೆ. ಈ ಯುಗದಲ್ಲಿ ಅನುಭಾವಿಗಳು ತಾವು ಬರೆದ ಸ್ವರವಚನಗಳಿಗೆ ತಾವೇ ಹೆಸರನಿಟ್ಟು ಸ್ವತಂತ್ರ ಕೃತಿಗಳನ್ನಾಗಿ ಮಾಡಿದ್ದಾರೆ.

ನಿಜಗುಣಶಿವಯೋಗಿಗಳಿಂದ ಈ ಯುಗದಲ್ಲಿ ಆರಂಭವಾದ ಕೈವಲ್ಯಪದಗಳ ಪರಂಪರೆ ಮುಂದೆ ಈ ಮಾದರಿಯಲ್ಲಿ ಅನೇಕ ಅನುಭಾವಿಗಳ ಅಧಿಕ ಸಂಖ್ಯೆಯ ಹಾಡುಗಳನ್ನು ರಚಿಸಲು ಪ್ರೇರಣೆ ನೀಡಿತು. ಅದ್ವೈತ, ತತ್ವ ಬೋಧೆ, ಲೋಕನೀತಿ, ಸರಳ ನೇರ ಭಾಷೆ, ಸ್ಥಲಾನುಗುಣ ಕೃತಿ ಸಂಯೋಜನೆ ಇವುಗಳ ವೈಶಿಷ್ಟ್ಯ . 18 ಮತ್ತು 19 ನೇ ಶತಮಾನದ ಕಾಲಘಟ್ಟವು ಸ್ವರವಚನಗಳ ಸುಗ್ಗಿಯ ಕಾಲವಾಗಿದೆ.

ಕೈವಲ್ಯಪದಗಳು ಭಕ್ತಿ ತತ್ವದ ಪ್ರತಿಪಾದನೆಯಿಂದಲೇ ಮುಕ್ತಿ ತತ್ವವನ್ನು ನಿರೂಪಿಸುವ ನಿಜಗುಣಾದಿ ಶಿವಯೋಗಿಗಳ ಹಾಡುಗಬ್ಬಗಳು ವೀರಶೈವ ಸಾಹಿತ್ಯದ ಪ್ರತೀಕಗಳಾಗಿವೆ. ಷಟ್ಸ್ಥಲ ಜ್ಞಾನ ಸಿದ್ಧಾಂತ ದೃಷ್ಟಿಯಿಂದ ಅನುಭವ ಮುಕ್ತಿಯೆಂಬಿವುಗಳು ಭಕ್ತಿಯ ಅವಸ್ಥಾ ವಿಶೇಷಗಳಲ್ಲದೆ ಬೇರಲ್ಲ. ಷಟ್ಸ್ಥಲ ಭಕ್ತಿಯನ್ನು ಎಲ್ಲರೂ ಸುಲಭವಾಗಿ ತಿಳಿದುಕೊಂಡು ಆ ಭಕ್ತಿ ಮಾರ್ಗದಲ್ಲಿ ನಡೆದು ತಮ್ಮ ಆತ್ಮೋದ್ಧಾರವನ್ನು ಮಾಡಿಕೊಳ್ಳಲೆಂಬ ಸದುದ್ದೇಶದಿಂದ ಕೆಲವು ವೀರಶೈವ ಕವಿಗಳು ಸುಲಭ ಸುಂದರ ಶೈಲಿಯಲ್ಲಿ ಹಾಡುಗಬ್ಬಗಳನ್ನು ರಚಿಸಿ ಅವುಗಳಿಗೆ ಕೈವಲ್ಯಪದಗಳೆಂದು ಹೆಸರಿಸಿರುವರು. ಈ ಪದಗಳಲ್ಲಿ ನೀತಿ, ಜ್ಞಾನ, ಕ್ರಿಯೆ, ಯೋಗ, ವೈರಾಗ್ಯ ಮೊದಲಾದ ಧಾರ್ಮಿಕ ಜೀವನಾವಶ್ಯಕವಾದ ವಿಷಯಗಳ ಪ್ರತಿಪಾದನೆ ಇರುತ್ತದೆ. ಇದೆಲ್ಲವೂ ಭಕ್ತಿಯ ಗರ್ಭದಲ್ಲಿ ಅಡಗಿರುತ್ತದೆ.

ಕೈವಲ್ಯಪದಗಳನ್ನು ರಚಿಸಿ ಪ್ರಸಿದ್ಧರಾಗಿರುವ ನಿಜಗುಣಶಿವಯೋಗಿಗಳು, ಸರ್ಪಭೂಷಣಶಿವಯೋಗಿಗಳು, ಬಾಲಲೀಲಾಮಹಾಂತಶಿವಯೋಗಿಗಳು ಮುಂತಾದವರು ಕೈವಲ್ಯಪದಗಳನ್ನು ರಚಿಸಿ ಕೈವಲ್ಯ ಸಂಪ್ರದಾಯವನ್ನು ಹುಟ್ಟುಹಾಕಿದ್ದು, ಆ ಸಂಪ್ರದಾಯವನ್ನು ಅನುಸರಿಸಿ ಕರಿವೃಷಭದೇಶೀಕೇಂದ್ರ ಸ್ವಾಮಿಗಳು ಕೈವಲ್ಯಪದಗಳನ್ನು ರಚಿಸಿರುವರು. ಇವರು ನಿಜಗುಣರಿಂದ ಪ್ರೇರಿತರಾಗಿ ಅವರ ಗ್ರಂಥಗಳನ್ನು ಆಳವಾಗಿ ಅಭ್ಯಾಸ ಮಾಡಿ ಅವರಲ್ಲಿಟ್ಟ ಪೂಜ್ಯಭಾವವನ್ನು ಅವರ ಕೈವಲ್ಯಪದದ 50ನೇ ಪದ್ಯದಲ್ಲಿ ಅತ್ಯಂತ ವಿನೀತಭಾವದಿಂದ ವ್ಯಕ್ತಪಡಿಸಿರುವರು ಮತ್ತು ತಮ್ಮ ಶಿವಾನುಭವದ ಹಿರಿಮೆಯಿಂದ ಪಡೆದ ನಿರಹಂಭಾವವನ್ನು ಸ್ವಾಮಿಗಳು "ಕನ್ನಡವಲ್ಲದೆ ಇನ್ನೇನರಿಯನು ಸೋಮೆಕಟ್ಟೆ ಸ್ತುತಿಯೆನುತ" (21ನೇ ಪದ್ಯ ) ಹಾಡಿ ಭಕ್ತರ ಹೃದಯವನ್ನು ಸಲ್ಲಿಸಿದನು (ಮೂಲದಲ್ಲಿ 'ಸೊಲ್ಲಿಸಿದನು' ಇದೆಯೇ?) ತೊದಲು ನುಡಿಯೊಳಗೆ ಬಲ್ಲ ಮಹಾತ್ಮರು ಇನ್ನೊಂದೆಣಿಸದೆ ಎಲ್ಲಾ ಮೆಚ್ಚಿರುವುದು. ಆ ಸ್ವಾಮಿಗಳು ಇಷ್ಟಲಿಂಗದ ವಿಷಯವಾಗಿ "ಏತರಭಯವಣ್ಣನನಗೀಗ ಇನ್ನೇತರ ಭಯವಣ್ಣ ಆತ ಶ್ರೀಗುರು ಕರುಣದಿ ಕರೆದು । ಜ್ಯೋತಿರ್ಲಿಂಗವ ಕರದೊಳಗಿಟ್ಟನು. ಏತರ ಭಯವಣ್ಣ" (34 ನೇ ಪದ್ಯ ) ಎಂದು ಹಾಡುತ್ತಾ ಲಿಂಗಧಾರಿಗಳಿಗೆ ಕಾಲಕಾಮಾದಿಗಳ ಭಯ ಇಲ್ಲ ಎಂಬುದನ್ನು ಬೋಧಿಸಿದ್ದಾರೆ. ತಮ್ಮ ಭಕ್ತರನ್ನು ನಿರ್ಭೀತರನ್ನಾಗಿ ಮಾಡಿರುವರು ಮತ್ತು ಏಕೋತ್ತರ ಶತಸ್ಥಲಗಳಲ್ಲಿ ಬರುವ ಶಿವನು

ಜಗನ್ಮಯನೆಂಬ ಸ್ಥಲದ ಚಿತ್ರವನ್ನು "ಬ್ರಹ್ಮವಾನುವೆನೆಂದು ಬಳಲುವರು ಜನವೆಲ್ಲ। ಬ್ರಹ್ಮವಲ್ಲದೆ ಜಗದೊಳನ್ಯವಿಲ್ಲ" (36ನೇ ಪದ್ಯ) ಎಂಬ ಹಾಡಿನಿಂದ ಚಿತ್ರಿಸಿದ್ದಾರೆ. ಹೀಗೆ ಇನ್ನೂ ಅನೇಕ ಪದಗಳು ಭಕ್ತಿಭಾವದಿಂದ ಕೂಡಿರುವವು. ಅವರ ಅಷ್ಟಾವರಣ ತ್ರಿಪದಿಯು ಮೈಲಾರದ ಬಸವಲಿಂಗಶರಣ ಗುರು ಕರುಣದ ತ್ರಿಪದಿಯಂತೆ ಕಂಠಪಾಠ ಮಾಡಲು ಅನುಕೂಲವಾಗಿದೆ.

ಇವರಿಂದ ಸ್ಫೂರ್ತಿ ಪಡೆದ ಅನೇಕ ಶಿಷ್ಯ ವರ್ಗದವರು ಇವರನ್ನು ಕುರಿತು ಪದ್ಯಗಳನ್ನು ರಚಿಸಿರುವುದನ್ನು ಡಾ. ಬಿ. ನಂಜುಂಡಸ್ವಾಮಿಗಳು ಗುರುತಿಸಿದ್ದಾರೆ. ಇವರ ಶಿಷ್ಯರ ಹಾಡುಗಳೂ ಜನಪ್ರಿಯವಾಗಿವೆ. ಆ ಶಿಷ್ಯರೆಂದರೆ ಮಲ್ಲೇನಹಳ್ಳಿ ಚನ್ನಬಸವಯ್ಯ, ಗುಬ್ಬಿ ಕಿಡಿಗಣ್ಣಪ್ಪ, ಹೊನ್ನುಡಿಕೆ ಗಂಗಾಧರ ಸ್ವಾಮಿಗಳು. 'ಕರಿವೃಷಭ ದೇಶೀಕೇಂದ್ರ ಸ್ವಾಮಿಗಳು ನೊಣವಿನಕೆರೆ ಕಾಡಸಿದ್ಧೇಶ್ವರ ಮಠದ ಅಧ್ಯಕ್ಷರಾಗಿ 19ನೇ ಶತಮಾನದಲ್ಲಿ ಮುನ್ನೆಡೆಸಿ ಕಮಿಷನರ್ ಬೌರಿಂಗ್ ದಂಪತಿಗಳನ್ನೇ ತಮ್ಮ ಶಿಷ್ಯರನ್ನಾಗಿಸಿಕೊಂಡು ಕನ್ನಡ ಸಾಹಿತ್ಯಕ್ಕೆ ಕೈವಲ್ಯಪದಗಳು, ಅಷ್ಟಾವರಣ ತ್ರಿವಿಧಿಗಳು, ಅಷ್ಟೋತ್ತರ ತ್ರಿವಿಧಿಗಳನ್ನು ರಚಿಸುವುದರ ಮೂಲಕ ಕೊಡುಗೆ ನೀಡಿದ್ದಾರೆ' ಎಂಬ ಡಿ.ಎನ್. ಯೋಗೀಶ್ವರಪ್ಪನವರ ಅನಿಸಿಕೆಯು ಇವರ ಹಿರಿಮೆಯ ದ್ಯೋತಕವಾಗಿದೆ.

ಒಟ್ಟಾರೆ ತಿಪಟೂರು ಪರಿಸರದ ಆಧುನಿಕಪೂರ್ವ ಕವಿಗಳು ಕನ್ನಡ ಸಾಹಿತ್ಯದ ಅದರಲ್ಲೂ ದೇಸಿ ಸಾಹಿತ್ಯ ಪ್ರಕಾರಗಳಾದ ವಿವಿಧ ಷಟ್ಪದಿ ಪ್ರಕಾರಗಳು (ಅದರಲ್ಲೂ ಭೋಗಷಟ್ಪದಿ), ಸಾಂಗತ್ಯ, ಹಾಡುಗಬ್ಬ ಪ್ರಕಾರಗಳಾದ ಕೈವಲ್ಯ ಸಾಹಿತ್ಯ, ಸ್ವರವಚನ, ತಾರಾವಳಿ ಸಾಹಿತ್ಯ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಇವರುಗಳು ರಚಿಸಿರುವ ಕೃತಿಗಳು ಧಾರ್ಮಿಕ ಕೃತಿಗಳಾದರೂ ಅಲ್ಲಲ್ಲಿ ಸಾಹಿತ್ಯದ ಸೊಗಸು ಇಣುಕಿಹಾಕಿದೆ. ದುರಾದೃಷ್ಟವಶಾತ್ ಈ ಕೃತಿಗಳ ಬಗೆಗೆ ಸರಿಯಾದ ಅಧ್ಯಯನ ನಡೆಯದೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸೂಕ್ತವಾದ ಸ್ಥಾನ ದೊರೆಯದಂತಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಪರಮಶಿವಮೂರ್ತಿ ಡಿ.ವಿ. & ನಂಜುಂಡಸ್ವಾಮಿ ಬಿ. (ಸಂಪಾದಕರು), (2021), ಕಾವ್ಯಕಲ್ಪ: ತುಮಕೂರು ಜಿಲ್ಲಾ ಪ್ರಾಚೀನ ಸಾಹಿತ್ಯ ಸಿರಿ – ಸಂಪುಟ – 1, ತುಮಕೂರು ಜಿಲ್ಲಾ ಕನ್ನಡ ಪರಿಷತ್, ತುಮಕೂರು.
2. ಶಿವಣ್ಣ ಎಸ್. (ಸಂಪಾದಕರು), ಪ್ರಸನ್ನದೇಶಿಕನ ಹೊನ್ನವಳ್ಳಿ ಸಿದ್ಧವೀರೇಶ್ವರನ ಪವಾಡ, ಪರಂಜ್ಯೋತಿ ಪತ್ರಿಕೆ, ಬೆಳಗಾವಿ.
3. ನಾಗಭೂಷಣ ಸಿ., (2018), ಶರಣ ಸಾಹಿತ್ಯ – ಸಂಸ್ಕೃತಿ ಕವಳಿಗೆ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
4. ಯೋಗೀಶ್ವರಪ್ಪ ಡಿ.ಎನ್., (2022), ತುಮಕೂರು ಜಿಲ್ಲೆ ಸಾಹಿತ್ಯ ಚರಿತ್ರೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
5. ವಿದ್ಯಾಶಂಕರ ಎಸ್., (2015), ವೀರಶೈವ ಸಾಹಿತ್ಯ ಚರಿತ್ರೆ, ಸಂ. 6, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
6. ಯೋಗೀಶ್ವರಪ್ಪ ಡಿ.ಎನ್. (ಸಂಪಾದಕರು), (2002), ಜಯಮಂಗಲಿ 69 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
7. ನಂಜುಂಡಸ್ವಾಮಿ ಬಿ. (ಸಂಪಾದಕರು), (2002), ಕಲ್ಪಸಿರಿ – ಅಖಿಲ ಭಾರತ 69 ಕನ್ನಡ ಸಾಹಿತ್ಯ ಸಮ್ಮೇಳನ ತುಮಕೂರು.
8. ಸಿದ್ಧಲಿಂಗಪ್ಪ ಕೆ.ಎಸ್. (ಪ್ರಧಾನ ಸಂಪಾದಕರು), (1997), ಚೆನ್ನುಡಿ ಸ್ಮರಣ ಸಂಚಿಕೆ, ತುಮಕೂರು ಜಿಲ್ಲಾ ಐದನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಗುಬ್ಬಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.